

## ॥ ಅಥ ಶ್ರೀ ಸಾಯಿ ಸಚ್ಚರಿತೆ ॥

## ಅಧ್ಯಾಯ ಐವತ್ತೊಂದು

*ಶ್ರೀ ಗಣೇಶಾಯ ನಮಃ ॥ ಶ್ರೀ ಸರಸ್ವತ್ಯೈ ನಮಃ ॥*
***ಶ್ರೀ ಗುರುಭ್ಯೋ ನಮಃ ॥ ಶ್ರೀ ಕುಲದೇವತಾಯೈ ನಮಃ ॥***
***ಶ್ರೀ ಸೀತಾರಾಮಚಂದ್ರಾಭ್ಯಾಂ ನಮಃ ॥ ಶ್ರೀ ಸದ್ಗುರು ಸಾಯಿನಾಥಾಯ ನಮಃ ॥***

ಜಯಜಯ ಸಾಯಿ ಭಕ್ತಧಾರನೇ ಗೀತಾರ್ಥ ಪ್ರಕಾಶಕ ಗುರುವರನೇ ।
ಸರ್ವ ಸಿದ್ಧಿ ಪ್ರದಾಯಕನೇ । ಕೃಪೆ ಮಾಡೆನ್ನ ಮೇಲೆ ॥ 1

ಮಾಡಲು ಶಾಖಶಮನ । ಮಲಯಗಿರಿಯಲಿ ಬೆಳೆಯುವರು ಚಂದನ ।
ಅಥವಾ ವಿಶ್ವ ಜನಕೀಯಲು ಸುಖವನ । ಘನ ವರ್ಷಿಸುವದು ಭೂಮಿಯ ಮೇಲೆ ॥ 2

ಅಥವಾ ದೇವರ ಪೂಜೆಗಾಗಲು । ವಸಂತದಲರಳುವವು ಸುಮಗಳು ।
ಅಥವಾ ಶ್ರೋತೃಗಳ ಸಮಾಧಾನಗೊಳಿಸಲು । ಆಖ್ಯಾನ ಪರಂಪರೆ ಆರಂಭವಾಯಿತು॥ 3

ಕೇಳಲು ಈ ಸಾಯಿಚರಿತ್ರ । ಹೇಳುಗ ಕೇಳುಗರಿಬ್ಬರೂ ಪವಿತ್ರ
ಕೇಳುಗರ ಕಿವಿಗಳು ಪವಿತ್ರ । ಮುಖ ಪವಿತ್ರ ಹೇಳುವವನದು ॥ 4

ಗತಾಧ್ಯಾಯದಲ್ಲಿ ಅಜ್ಞಾನ ನಿರಸನ । ಆದಾಗ ಹೇಗೆ ಪ್ರಕಟವಾಗುವುದು ಜ್ಞಾನ ।
'ತ್ವದ್ವಿದ್ಧಿ ಪ್ರಣಿಪಾತೇನ' । ಶ್ಲೋಕಾರ್ಥದ ನಿರೂಪಣೆಯಾಯಿತು ॥ 5

ಪರಿಸಮಾಪ್ತಿ ಭಗವದ್ಗೀತೆಗೆ । ಹದಿನೆಂಟು ಅಧ್ಯಾಯಗಳ ಕೊನೆಗೆ ।
ಶ್ರೀ ಕೃಷ್ಣ ಕೇಳುವ ಅರ್ಜುನನಿಗೆ । ಎಪ್ಪತ್ತೆರಡನೆಯ ಶ್ಲೋಕದಲ್ಲಿ ॥ 6

ಇಲ್ಲಿಯವರೆಗಾಯಿತು ಪ್ರವಚನ । 'ಆದರಿಂದಾಯಿತೇ ಮೋಹನಿರಸನ' ।
ಆಯಿತೇ ನೀ ಕೇಳುತಿದ್ದುದರ ಜ್ಞಾನ । ಎಂದು ಸ್ಪಷ್ಟ ಪ್ರಶ್ನೆಯ ಕೇಳಿದನು ॥ 7

ಹಾಗೇಯೇ ಪಾರ್ಥನೂ ಉತ್ತರವಿತ್ತು । 'ನನ್ನ ಮೋಹವೆಲ್ಲ ಹಾರಿಹೋಯಿತು' ।
ಮತ್ತೆಂದ 'ಮೋಹವಿಚ್ಛಿತಿಯಾಯಿತು । ಆದರೇ ಜ್ಞಾನ ಪ್ರಾಪ್ತಿಯಾಗಲಿಲ್ಲ' ॥ 8

ಮೋಹವೆಂಬುದು ಕೇವಲ ಅಜ್ಞಾನವಿದ್ದು । ನೋಡಲು ಮಾತ್ರ ಶಬ್ದಗಳು ಎರಡು ।
ಅರ್ಥಭೋಧದಲ್ಲಿ ಭೇಧ ವಿರದದ್ದು । ಗೀತಾರ್ಥಜ್ಞರು ತಿಳಿದಿರುವರಿ'ದ ॥ 9

ಯತ್ವಯೋಕ್ತವಚಸ್ತೆನ' । 'ಮೋಹೊಯಂ ವಿಗತೋ' ಎಂಬದನ್ನ ।
ಹೊನ್ನೊಂದನೆಯ ಅಧ್ಯಾಯಾರಂಭದಲಿ ಅರ್ಜುನ । ಶ್ರೀ ಕೃಷ್ಣನಿಗೆ ಹೇಳಿರುವನು ॥ 10

ಈಗಿನ ಹೊಸ ಅಧ್ಯಾಯಾರಂಭದಲಿ । ಕಾಕಾ ಸಾಹೇಬರನು ತಂದು ಅಲ್ಲಿ ।
ಹೇಗೆ ಸ್ಥಾಪಿಸಿದರವರನು ಶಿರಡಿಯಲ್ಲಿ । ಆ ವಿಸ್ಮಯಯಜನಕ ವಿವೇಚನೆ ಕೇಳಿರಿ ॥11

ಅವರಿಗೆ ಶಿರಡಿಯ ಋಣಾನುಬಂಧ । ಸಾಯಿಯೊಡನವರ ದೃಢಸಂಬಂಧ ।
ಮೂಲದಲಿ ಹೇಗೆ ಕಾರಣ ನಿರ್ಭಂಧ । ಅದನೆಲ್ಲ ಸಂಪೂರ್ಣ ಹೇಳುವೆ ॥ ·12

ಅವರ ಕಥೆಗಳು ಬೇಕಾದಷ್ಟು । ಹಿರಿಕಿರಿಯರಿಗೆಲ್ಲ ಗೊತ್ತು ।
ಆದರವರು ಆರಂಭದಲಿ ಹೇಗೆ ಶಿರಡಿಯ ಕುರಿತು । ಬಂದರೆಂಬುವುದು ತಿಳಿದಿಲ್ಲ ಎಲ್ಲರಿಗೂ ॥ 13

ಪೂರ್ವಪುಣ್ಯದ್ದೇ ಇದು ಸಂಗತಿ । ಅದರಿಂದಲೇ ದೇವರ ಕೃಪಾ ದೃಷ್ಟಿ ।
ಇದರಿಂದ ಮುಂದೆ ಸದ್ಗುರುವಿನ ಭೆಟ್ಟಿ । ಸ್ವಾನಂದ ಪುಷ್ಟಿ ಶಿಷ್ಯನಿಗೆ ॥ 14

ಇದು ಹಿಡಿದು ಈಗ ಈ ಅಧ್ಯಾಯ । ಹೇಳುವುದು ಕಥಾತ್ರಯ ।
ಮೂರುಭಕ್ತರ ಈ ಮಹೋದಯ । ಶ್ರೋತೃಗಳ ಹೃದಯ ತಣಿಸುವುದು ॥ 15

ಇದಲ್ಲದೆ ಉಪಾಯ ನೂರಾರು । ಪರಮಾರ್ಥ ಪ್ರಾಪ್ತಿಗಾಗಿ ಮಾಡಿದರೂ ।
ಬೀರದಿರೆ ಕೃಪಾದೃಷ್ಟಿ ಗುರು । ಪರಮಾರ್ಥವೆಂದೂ ಸಿಗಲಾರರು ॥ 16

ಈ ಅರ್ಥದ ಕಥೆಯ ರುಚಿರ । ಕೇಳಿದಾಗ ತಣಿಯುವುದು ಆತುರ ।
ಶ್ರೋತೃಗಳ ಮನದಲ್ಲಿ ಆದರ । ನಿಜ ಸ್ವಾರ್ಥದ್ದಾದೀತಿದರಿಂದ ॥ 17

ಗುರುಭಕ್ತರ ಸಮಾಧಾನ । ಮಾಡುವದೀ ಅಧ್ಯಾಯ ಪರಮಾಪಾವನ ।
ಶ್ರೋತೃಗಳಾಗಿ ಸಾವಧಾನ । ಹಿತಕರವಾದಿದನು ಕೇಳಬೇಕು ॥ 18

ಆ ಪೂರ್ವಪೀಠಿಕೆ ಅವರದು । ರಸಿಕರಿಗೆ ಆನಂದದಾಯಕವದು ।
ಭಕ್ತಭಾವಿಕರಿಗೆ ಹೇಳುತಿದ್ದು । ಶ್ರವಣಾನಂದ ಪಡೆಯುವುದಕೆ ॥ 19

ಹರಿಸೀತಾರಾಮ ದೀಕ್ಷಿತರು । ಕಾಕಾ ಸಾಹೇಬರೆಂದು ಹೆಸರಾದವರು ।
ಸಾಯಿಬಾಬಾರ ಎಲ್ಲ ಭಕ್ತರು । ಪ್ರೀತ್ಯಾದರಗಳಿಂದ ನೆನೆವರವರನು ॥ 20

ಸನ್ ಹತ್ತೊಂಬತ್ತು ನೂರಾ ಒಂಭತ್ತರವರೆಗೆ । 'ಸಾಯಿ' ಈ ಹೆಸರೇ ಗೊತ್ತಿರಲಿಲ್ಲವರಿಗೆ ।
ಮುಂದೆ ಅವರೇ ಪರಮಭಕ್ತರಾದರು ಸಾಯಿಗೆ । ಇದೆಲ್ಲರಿಗೂ ತಿಳಿದಿದೆ ॥ 21

ವಿಶ್ವವಿದ್ಯಾಲಯದ ಶಿಕ್ಷಣ ಮುಗಿದು । ಎಷ್ಟೋ ವರ್ಷಗಳೂ ಹೋಗಲು ಕಳೆದು ।
ನಾನಾ ಸಾಹೇಬ ಚಾಂದೋಕರರದು । ಒಮ್ಮೆ ಆಗಮನವಾಯಿತು ಲೋಣಾವಲೆಗೆ ॥ 22

ದೀಕ್ಷಿತರವರ ಹಳೆಯ ಮಿತ್ರರು । ಎಷ್ಟೋ ವರ್ಷಗಳ ನಂತರ ಭೆಟ್ಟಿಯಾಗಿದ್ದರು ।
ಸುಖ ದುಃಖದ ವಾರ್ತೆಗಳನವರು । ಪರಸ್ಪರರಿಗೆ ಹೇಳಿಕೊಂಡರು ॥ 23

ಲಂಡನ್ ನಗರದಲ್ಲಿ ರೈಲು ಹತ್ತುತ್ತಿರಲು । ಜಾರಿತು ದೀಕ್ಷಿತರ ಕಾಲು ।
ಆ ವ್ಯಥೆಗೆ ಮಾಡಿದರೂ ನೂರಾರು ಉಪಾಯಗಳು । ಉಪಯೋಗವಿಲ್ಲದಂತಾಯಿತು ॥ 24

ಸಾದ್ಯಂತ ವಾರ್ತೆ ಆ ವ್ಯಥೆಯದು । ಸಹಜ ಸಂಭಾಷಣೆಯಲಿ ಬಂದು ।
ಅಲ್ಲಿ ನಾನಾರ ನೆನಪಿಗೆ ಬಂದದು । ಶ್ರೀ ಸಾಯಿಬಾಬಾರ ಉಪಯುಕ್ತತೆ ॥ 25

ನಿಮ್ಮ ಆ ಕಾಲು ಕುಂಟುವದು । ಎನಿಸುವದೇ ಅದು ನಿಃಶೇಷ ಸರಿಯಾಗಬೇಕೆಂದು ।
ನಡೆಯಿರಿ ನಮ್ಮ ಗುರುವಿನ ದರ್ಶನಕ್ಕೆ ಎಂದು । ಆಗ ನಾನಾ ದೀಕ್ಷಿತರಿಗೆ ಹೇಳಿದರು ॥26

ಬಳಿಕ ನಾನಾ ವಿಸ್ಮಯ ವಿಶೇಷವೆಂದು । ಸಂಪೂರ್ಣ ಸಾಯಿಯ ವೃತ್ತ ಹೀಗೆಂದು ।
ಆನಂದದಿ ದೀಕ್ಷಿತರಿಗೆ ಹೇಳಿದ್ದು । ಮಹಾತ್ಮೆ ಸಂತಾವಸಂತರದು ॥ 27

“ನನ್ನವರೆಂಬ ಮನುಷ್ಯರು । ಏಳು ಸಮುದ್ರಗಳಾಚೆ ಇದ್ದರೂ ।
ನಾ ಅವರ ಹಕ್ಕಿಯ ಕಾಲಿಗೆ ದಾರಕಟ್ಟಿದಂತಾದರೂ । ತಡವಿಲ್ಲದವರ ಎಳೆತರುವೆ’ ॥ 28

ಇದು ಬಾಬಾರ ನಿತ್ಯವಚನ । ಅದರ ಮೇಲೆ ನಾನಾರ ಪ್ರವಚನ ।
ಎಂದರು ಆಗದು ನಿಮಗವರ ಆಕರ್ಷಣ । ನೀವವರವಲ್ಲದಿರಲು ॥ 29

ನೀವವರವರಿದ್ದ ವಿನಃ । ನಿಮಗಾಗಲಾರದವರ ದರ್ಶನ ।
ತಿಳಿಯಿರಿ ಇದೇ ಬಾಬಾರ ಮುಖ್ಯ ಗುರುತೆಂಬದನ । ಅದಿಲ್ಲದೇ ನೀವೇ ಅಲ್ಲಿ ಹೋಗಲಾದಿತೇ ॥ 30

ಸಾಯಿಯ ವರ್ಣನೆಯ ಕೇಳಿ ಹೀಗೆ । ಸಮಾಧಾನವಾಯಿತು ದಿಕ್ಷೀತರ ಮನಸಿಗೆ ।
ಬಳಿಕವರೆಂದರು ನಾನಾಗೆ । ನಾನೂ ಬಾಬಾರ ದರ್ಶನ ತೆಗೆದುಕೊಳ್ಳುವೆ ॥ 31

ನನ್ನಕಾಲಿದು ಏನಂಥದು । ಈ ದೇಹವೇ ನಶ್ವರವಾದುದು ।
ನನ್ನ ಕಾಲಿನ ವ್ಯಥೆ ಕೊನೆತನಕ ಇರವಲ್ಲದು । ನನಗದರ ಚಿಂತೆ ಇಲ್ಲ ॥ 32

ನನ್ನ ಗುರುವಿನ ದರ್ಶನಕ್ಕೆ ನಾ ಹೋಗುವೆನು । ಪಡೆಯಲು ಆ ನಿರತಿಶಯ ಸುಖದ ಸಂಪಾದನೆಯನು ।
ಹಿಡಿದಿಲ್ಲ ಅಲ್ಪ ಸುಖದ ಕಾಮನೆಯನು । ಅದರ ಯಾಚನೆ ನಾ ಮಾಡಲಾರೆ ॥ 33

ಬ್ರಹ್ಮವ ಬಿಟ್ಟು ಬೇರಿಲ್ಲ ಸುಖ । ಆ ಸುಖವೇ ಆಮೌಲಿಕ ।
ನಾನಾಗುವೆ ನಿಮ್ಮ ಸೇವಕ । ಈ ಒಂದು ಅಮೂಲ್ಯ ಸುಖಕ್ಕಾಗಿ ॥ 34

ಇರಲೆನ್ನ ಕಾಲಿನ ಕುಂಟು । ಅದರ ವಿವಂಚನೆ ನನಗಿಲ್ಲ ಇನಿತೂ ।
ಆದರೆ ನನ್ನ ಕುಂಟು ಮನವಿನಿನಿತು । ಸರಿಪಡಿಸಲೆಂದು ಪ್ರಾರ್ಥಿಸುವೆ ।. 35

ಸಾಧನೆ ಮಾಡುತ್ತ ಬಹಳ ದಣಿದೆ । ಆದರೂ ಮನ ನಿಶ್ಚಲವಾಗದೇ ।
ಪ್ರಯತ್ನದಿಂದ ಸ್ವಾಧೀನದಲ್ಲಿಡಬೇಕೆಂದೆ । ಆದರೆ ಜಾರುವುದು ನಾನರಿಯದಂತೆ ॥ 36

ಎಷ್ಟೇ ಎಚ್ಚರಿಕೆ ವಹಿಸಿದರೂ । ಅತ್ಯಂತ ಮನೋನಿಗ್ರಹ ಮಾಡಿದರೂ ।
ಕಣ್ಣು ತಪ್ಪಿಸಿಹೋಗುವುದು ಆದರೂ । ಆಶ್ಚರ್ಯವೆನಿಸುತಿದೆ ಈ ಮನಸಿನದು ॥ 37

ಆದರೂ ನಾನಾ ಮನಃ ಪೂರ್ವಕವಾಗಿ ನಾನು । ನಿಮ್ಮ ಗುರುವಿನ ದರ್ಶನ ತೆಗೆದುಕೊಳ್ಳುವೆನು
।ನನ್ನ ಮನಸಿನ ಈ ಕುಂಟುತನವನು । ಕಳೆಯಬೇಕೆಂದು ಪ್ರಾರ್ಥಿಸುವೆ ॥ 38

ನಶ್ವರ ಶರೀರ ಸೌಖ್ಯದತ್ತ ಉದಾಸಿನತೆ । ಆತ್ಯಂತಿಕ ಸೌಖ್ಯದತ್ತ ಆಸ್ಥೆ ।
ಇಂಥ ಭಕ್ತನ ಪರಮಾರ್ಥಕ್ಕೆ । ಪರಮ ಉಲ್ಲಾಸ ಸಾಯಿಗೆ ॥ 39

ಧಾರಾಸಭೆಯ ಚುನಾವಣೆಬಂದು । ಎಲ್ಲೆಡೆ ವಿಷಯ ಅದೇ ಒಂದು ।
ಎಲ್ಲೆಲ್ಲೂ ಅನೇಕ ಜನ ತೊಡಗಿದ್ದು । ಈ ಕೆಲಸ ಬಹು ಸಂಖ್ಯ ॥ 40

ಕಾಕಾ ಸಾಹೇಬರು ತಮಗಾಗಿ । ಜನಮತಗಳಿಸುವ ಸಲುವಾಗಿ ।
ಬಂದಾಗ ಸ್ನೇಹಿತರ ಭೆಟ್ಟಿಗಾಗಿ । ತತ್ಕಾಲದಲಿ ಅಹಮದ ನಗರಕ್ಕೆ ॥ 41

ಕಾಕಾ ಸಾಹೇಬ ಮೀರೀಕರ । ಎಂಬ ಒಬ್ಬ ಅಲ್ಲಿಯ ಸರದಾರ ।
ಮನೆಯವರಂತೇ ಇದ್ದ ಆ ಸ್ನೇಹಿತರ । ಮನೆಯಲ್ಲಿ ಸುಖವಾಗಿ ಇದ್ದರು ॥ 42

ಅದೇ ಆ ಸಮಯದಲ್ಲಿ । ಕುದುರೆಯ ಪ್ರದರ್ಶನವಿತ್ತು ನಗರದಲ್ಲಿ ।
ಅದಕೆ ನಾನಾ ಪ್ರಕಾರದ ಜನರಲ್ಲಿ । ತೊಡಗಿದ್ದರು ಆ ಕಾರ್ಯದಲ್ಲಿ ॥ 43

ಬಾಳಾ ಹಾಸೇಬ ಮೀರೀಕರರು । ಕೋಪರಗಾವದ ಮಾಮಲೆದಾರರು ।
ಪ್ರದರ್ಶನಕ್ಕೆ ಹಾಜರಿದ್ದರು । ಅಹಮದನಗರ ಪಟ್ಟಣದಲ್ಲಿ ॥ 44

ಯಾವುದಕೆ ದೀಕ್ಷಿತರ ಆಗಮನವಾಗಿತ್ತು । ಅದೆಲ್ಲ ಕಾರ್ಯ ಆಗ ಮುಗಿದಿತ್ತು ।
ಶಿರಡಿಯವರೆಗೆ ಹೇಗೆ ಹೋಗಲಾದೀತು । ಯಾರೆನ್ನನಲ್ಲಿ ಕರೆದೊಯ್ಯಬೇಕು॥ 45

ಅಲ್ಲಿಯ ಕಾರ್ಯವೆಲ್ಲ ಮುಗಿದಾಗ । ಕಾಣ ತೊಡಗಿತು ಶಿರಡಿಯ ಮಾರ್ಗ ।
ಬರಬೇಕು ಬಾಬಾರ ದರ್ಶನಯೋಗ । ಇದೊಂದೇ ಒಳಗಿರುವ ಅನಿಸಿಕೆ ॥ 4

ನನ್ನ ಜೊತೆಗಾರು ಬಂದಾರು । ಬಾಬಾರೆದುರು ಕರೆದೊಯ್ದಾರು ।
ಅವರ ಚರಣಗಳ ಮೇಲೆನ್ನ ಹಾಕಿಯಾರು । ಇದೇಚಿಂತೆ ದೀಕ್ಷಿತರಿಗೆ ॥ 47

ಚುನಾವಣೆಯ ಕೆಲಸ ಮುಗಿಯಿತು । ಇನ್ನು ಶಿರಡಿಗೆ ಹೋಗುವದೆಂತು ।
ದೀಕ್ಷಿತರಿಗೀ ಚಿಂತೆ ಹತ್ತಿತು । ಆದರದಿ ಮೀಶರರಿಕೆರರಿಗೆ ವಿನಂತಿಸಿದರು ॥ 48

ಕಾಕಾಸಾಹೇಬ ಮೀರಿಕರ । ಬಾಳಾಸಾಹೇಬ ಅವರ ಕುಮಾರ ।
ವಿಚಾರ ಮಾಡಿದರು ಪರಸ್ಪರ । ದೀಕ್ಷಿತರೊಡನಾರು ಹೋಗಬೇಕೆಂದು ॥ 49

ಇಬ್ಬರಲ್ಲಿ ಯಾರಾದರೊಬ್ಬರು । ಇದ್ದರೆ ಜೊತೆಗೆ ಬೇಕಿಲ್ಲ ಇನ್ನೊಬ್ಬರು ।
ಆದರೂ ಯಾರು ಹೋಗುವರು । ಎಂಬ ವಿಚಾರ ನಡೆಯಿತು ॥ 50

ಮಾನವನ ರೀತಿಯಲ್ಲಿ ಮನುಷ್ಯನ ಕಲ್ಪನೆ । ಆದರೆ ಈಶ್ವರನದು ಬೇರೆಯೇ ಯೋಜನೆ।
ನಡೆಯಿತು ಅಕಲ್ಪಿತ ಘಟನೆ । ದೀಕ್ಷಿತರ ಶಿರಡೀಗಮನದ್ದು ॥ 51

ಇಲ್ಲಿ ಹೀಗಿವರು ತಳಮಳಿಸುತಿದ್ದುದು । ಮತ್ತೊಂದೆಡೆ ಏನು ನಡೆಯುತ್ತಿರುವುದು ।
ಭಕ್ತನ ಪ್ರಬಲ ಇಚ್ಛೆಯನು ಕಂಡು । ಬಾಬಾ ಹೇಗೆ ಕಳವಳಗೊಂಡರು ॥ 52

ದೀಕ್ಷಿತರು ವಿಚಾರ ಮಾಡುತ್ತ ಈ ರೀತಿಯಾಗಿ । ಕುಳಿತರಲ್ಲಿ ಸಂಚಿತರಾಗಿ ।
ಆಶ್ಚರ್ಯವಾಯಿತೆಲ್ಲರಿಗೆ । ಮಾಧವರಾಯರೇ ಬಂದಾಗ ನಗರಕ್ಕೆ ॥ 53

ಮಾಧವರಾಯರಿಗವರ ಮಾವನಿಂದ । ತಂತಿ ಬಂದಿತು ನಗರದಿಂದ ।
ಅದರಲ್ಲಿ ಅವರತ್ತೆ ತೀರ ಅಸ್ವಸ್ಥರಿದ್ದ । ಕಾರಣ ಹೊರಟು ಬರಲು ತಿಳಿಸಿದ್ದರು ॥ 54

ತಂತಿ ಸಿಕ್ಕ ಕೂಡಲೇ ಸಿದ್ಧರಾದರು । ಬಾಬಾರ ಅನುಜ್ಞೆಯನ್ನೂ ಪಡೆದರು ।
ಚಿಥಳಿ ಸ್ಟೇಶನ್ನಿಗೆ ಹೊರಟರು । ಜೊತೆಗೆ ಪತ್ನಿಯ ಕರೆದುಕೊಂಡು ॥ 55

ಮೂರುಗಂಟೆಯ ಗಾಡಿಹಿಡಿದರು । ಇಬ್ಬರೂ ನಗರಕ್ಕೆ ಬಂದರು ।
ಬಂಡಿಯಿಂದ ಕೆಳಗಿಳಿದರಿಬ್ಬರೂ । ಬಾಗಿಲಿಗೆ ಗಾಡಿ ಬಂದಾಗ ॥ 56

ಇಷ್ಟಾಗುವಾಗ ನಾನಾ ಸಾಹೇಬ ಪಾನಶೆಯವರು । ಮತ್ತು ಅಪ್ಪಾಸಾಹೇಬ ಗದ್ರೆಎಂಬವರು ।
ಪ್ರಸಂಗವಶವಾಗಿ ಅಲ್ಲಿಗೆ ಬಂದರು । ಪ್ರದರ್ಶನ ನೋಡಲು ಆ ಮಾರ್ಗದಲ್ಲಿ ॥57

ಮಾಧವರಾಯರು ಕೆಳಗಿಳಿಯುವದು । ಅಕಸ್ಮಾತ ಅವರ ದೃಷ್ಟಿಗೆ ಬಿದ್ದು ।
ಬಹಳ ಆಶ್ಚರ್ಯವೆನಿಸಿದ್ದು । ಹಿಡಿಸಲಾರದಷ್ಟಾನಂದವಾಯಿತು ॥ 58

ಎಂದರು ನೋಡಲ್ಲಿ ಸುದೈವದಿಂದ ಇವರು। ಶಿರಡಿಯಲ್ಲಿ ಪೂಜಾರಿಯಾದ ಮಾಧವಾರಾಯರು ।
ಇದಕಿಂತ ಬೇರೆ ಒಳ್ಳೆಯವರು । ದೀಕ್ಷಿತರ ಕರೆದೊಯ್ಯಲಿನ್ನಾರು ಬೇಕು ? ॥ 59

ಬಳಿಕವರನ್ನು ಕರೆದು ಹೇಳಿದರು । ದೀಕ್ಷಿತರೆ ಕಾಕಾ ಬಂದಿರುವರು ।
ಮಿರೀಕರರಲ್ಲಿಳಿದು ಕೊಂಡಿರುವರು । ಬಾಬಾರ ಕೌತುಕವ ನೋಡಿರಿ ॥ 60

ದೀಕ್ಷಿತರು ನಮ್ಮ ಪರಮ ಸ್ನೇಹಿತರಿದ್ದು । ನಿಮಗವರ ಗುರುತಾಗುವದು ।
ಅವರು ಶಿರಡಿಗೆ ಹೋಗಲತ್ಯಂತ ಉತ್ಸುಕರಾಗಿದ್ದು । ನಿಮ್ಮ ಆಗಮನದಿಂದ ಸಂತೋಷ ಅವರಿಗೆ ॥ 61

ಹೀಗವರಿಗೆ ಹೇಳಿಕಳಿಸಿ । ದೀಕ್ಷಿತರಿಗೂ ವಾರ್ತೆ ತಿಳಿಸಿ ।
ಅವರ ಚಿಂತೆ ದೂರಾಯಿತದನಾಲಿಸಿ । ಅತ್ಯಂತ ಹರುಷಗೊಡರು ॥ 62

ಮಾವನ ಮನೆಗೆ ಹೋಗಿ ನೋಡಿದಾಗ । ಸರಿಯಾಗಿತ್ತು ಅತ್ತೆಯ ಆರೋಗ್ಯ ।
ಮಿರೀಕರರವರೆ ಕರೆಕಳುಹಿದಾಗ । ಮಾಧವರಾಯರು ವಿಶ್ರಾಂತಿ ಪಡೆಯುತ್ತಿದ್ದರು ॥ 63

ಮನ್ನಣೆಯಿತ್ತು ಅವರ ಕರೆಗೆ । ಒಂದಿಷ್ಟು ಸಂಜೆಯಾದ್ಯಾಗೆ ।
ಮಾಧವರಾಯರು ಹೋದರಲ್ಲಿಗೆ । ದೀಕ್ಷಿತರ ಭೆಟ್ಟಿಯಾಗಲು ॥ 64

ಭೆಟ್ಟಿಯಾಗುತಿದ್ದು ಅದೇ ಮೋದಲ ಸಲ ಅವರು । ಬಾಳಾ ಸಾಹೇಬ ಇಬ್ಬರಪರಿಚಯ ಮಾಡಿಸಿದರು ।
ರಾತ್ರಿ ಹತ್ತುಗಂಟೆಯಗಾಡಿಗೆ ಅವರಿಬ್ಬರೂ । ಹೊರಡುವದನು ಗೊತ್ತುಮಾಡಿದರು ॥ 65

ಹೀಗೆ ಈ ವಿಚಾರ ಗೊತ್ತುಪಡಿಸಿದ್ದು । ಬಳಿಕ ನೋಡಿರಿ ಚಮತ್ಕಾರ ನಡೆದದ್ದು ।
ಬಾಳಾಸಾಹೇಬರು ಬದಿಗೆ ಸರಿಸಿದ್ದು । ಬಾಬಾರ ಭಾವಚಿತ್ರದ ಮೇಲಿನ ತೆರೆಯನು ॥ 66

ಬಾಬಾರ ಭಾವ ಚಿತ್ರವಿದು । ಮೇಘಾ ಬಾಬಾಬರಪರಮಭಕ್ತನಿದ್ದು ।
ಪರಮ ಪ್ರೀತಿಯಿಂದ ಪೂಜಿಸುತಿದ್ದು । ಶಂಕರ ತ್ರಿನೇತ್ರನೆಂಬ ಭಾವನೆ ಇಟ್ಟುಕೊಂಡು ॥ 67

ಅದರ ಕಾಜು ಒಡೆದಿತ್ತು । ಅದನು ಮತ್ತೇ ಕೂಡಿಸಬೇಕಾಗಿತ್ತು ।
ಬಾಳಾಸಾಹೇಬರ ಜೊತೆಗೆ ಹೊರಟು । ನಗರಕ್ಕೆ ಬಂದಿದ್ಧರು ಮೊದಲ ಸಲ ॥ 68

ಈಗ ಆ ಭಾವಚಿತ್ರವು ಸಿದ್ಧವಾಗಿ ಮತ್ತೇ । ದೀಕ್ಷಿತರದೇ ದಾರಿ ನೋಡುತ್ತಿರುವಂತೆ ।
ಇಡಲಾಗಿತ್ತು ವಸ್ತ್ರದಲ್ಲಿ ಸುತ್ತಿ ಮೀರಿಕರರ ಪಡಸಾಲೆಯಲ್ಲಿ ॥ 69

ಅಶ್ವ ಪ್ರದರ್ಶನ ಮುಗಿಸಿಕೊಂಡು । ಬಾಳಾಸಾಹೇಬರು ತಿರುಗಿ ಬರುವದು ।
ಇನ್ನು ತಡವಾಗುವದೆಂದು । ಮಾಧವರಾಯರ ಕೈ ಗೊಪ್ಪಿಸಿದರದನು ॥ 70

ಮುಸುಕಿನಿಂದದನು ಹೊರತೆಗೆದು । ಮಾಧವರಾಯರ ಕೈಗೆ ಕೊಡುತಿದ್ದು ।
ಎಂದರು ಬಾಬಾರಜೊತೆ ಮಾಡಿಕೊಂಡು । ಸುಖದಿಂದಶಿರಡಿಗೆ ಹೋಗಿ ಬನ್ನಿ ॥ 71

ಆಗ ಆ ಮನೋಹರವಾದ ಚಿತ್ರವನ । ಮೊದಲ ಸಲ ಮಾಡಲು ಅದರ ಅವಲೋಕನ ।
ಕಾಕಾಸಾಹೇಬರದಕೆ ಮಾಡಿ ನಮನ । ಆನಂದ ನಿರ್ಭರರಾಗಿ ನೋಡತೊಡಗಿದರು ॥ 72

ನೋಡಿ ಆ ಘಟನೆ ವಿಚಿತ್ರ । ಅಂತೆಯೇ ಅಕಲ್ಪಿತ,ರಮ್ಯ, ಪವಿತ್ರ ।
ಸಮರ್ಥಸಾಯಿಯ ಭಾವ ಚಿತ್ರ । ದೀಕ್ಷಿತರ ನೇತ್ರಗಳಲ್ಲಿ ಸ್ಥಿರವಾದವು ॥ 73

ಯಾರ ದರ್ಶನದ ಉದ್ದೇಶವಿತ್ತು । ಅವರದೇ ಮೂರ್ತಿವೆತ್ತ ಪ್ರತಿಮೆ ಇದಾಗಿತ್ತು ।
ದಾರಿಯಲ್ಲಿದ್ದಾಗಲೇ ನೋಡಲು ಸಿಕ್ಕಿತು । ಅತ್ಯಂತ ಅಲ್ಹಾದವಾಯಿತು ॥ 74

ಅದೂ ಬರಬೇಕು ಶಿರಡಿಯಲ್ಲಿ । ಕಾಕಾಸಾಹೇಬ ಮಿರೀಕರರ ಮನೆಯಲ್ಲಿ ।
ಅದೇ ಕಾಲಕ್ಕಿರಬೇಕು ದೀಕ್ಷಿತರೂ ಅಲ್ಲಿ । ಈ ವಿಚಿತ್ರ ಯೋಗವನ್ನು ನೋಡಿ ॥ 75

ದೀಕ್ಷಿತರ ಮನದ ಭಾವಾರ್ಥ । ಪೂರೈಸಲು ಸಾಯಿ ಸಮರ್ಥ ।
ಎನಿಸಿತು ಬಂದು ನಿಂತಿಹರು ಈ ನಿಮಿತ್ತ । ಭಕ್ತಮಿರೀಕರರ ಮನೆಯಲ್ಲಿ ॥ 76

ಲೋಣಾವಳೆಯಲ್ಲಿ ನಾನಾರ ದರ್ಶನ । ಅವರೊಡನೆ ನಡೆದ ಸಂಭಾಷಣ ।
ಅಲ್ಲಿಯೇ ಬಾಬಾರ ಗುರುತ್ವಾಕರ್ಷಣ । ಭೇಟ್ಟಿಯ ಬೀಜಾರೋಪಣಾವಾಯಿತು ॥ 77

ಇಲ್ಲದಿದ್ದರೆ ಶಿರಡಿಯಲ್ಲಿದ್ದ ಚಿತ್ರವದು । ಅದೇ ಕಾಲಕ್ಕೇಇಲ್ಲಿಗೇಕೆ ಬಂದದ್ದು ।
ಇಷ್ಟು ದಿನ ಇಲ್ಲಿಯೇ ಉಳಿದದ್ದು । ಮುಸುಕಿನಲ್ಲಾವೃತವಾಗಿ ॥ 78

ಈ ಪ್ರಕಾರ ಗೊತ್ತು ಪಡಿಸಿದ್ದು । ಆ ಭಾವಚಿತ್ರದು ಜೊತೆಗೆ ತೆಗೆದಕೊಂಡು ।
ಮಾಧವರಾಯ,ದೀಕ್ಷಿತರು ಕೂಡಿಕೊಂಡು । ಹೊರಟರು ಮನದಲಿ ಮೋದಭರಿತರಾಗಿ ॥ 79

ಊಟ ಮುಗಿಸಿ ಅದೇ ರಾತ್ರಿಗೆ । ಹೋದರಿಬ್ಬರೂ ನಿಲ್ದಾಣಕ್ಕೆ ।
ತಿಕೀಟು ಪಡೆದು ಎರಡನೆಯ ವರ್ಗಕ್ಕೆ । ದಾರಿ ಕಾಯುತ್ತ ನಿಂತರು ॥ 80

ಹತ್ತರ ಗಂಟೆ ಬಿದ್ದಾಗ ಕಿವಿಗೆ । ಉಗಿಬಂಡಿ ಬಂದಿತಲ್ಲಿಗೆ ।
ಎರಡನೆಯ ವರ್ಗದ ಡಬ್ಬಿ ನೋಡಿದಾಗ್ಯೆ । ಅತಿ ವ್ಯತಿರಕ್ತ ತುಂಬಿದ್ದು ಕಂಡಿತ್ತು ॥81

ಪ್ರಸಂಗ ಇಂಥದ್ದು ಬಂದೊದಗಿತ್ತು । ಇಬ್ಬರಿಗೂ ಚಿಂತೆಯಾಯಿತು ।
ಸಮಯವೂ ಸ್ವಲ್ವೇ ಉಳಿದಿತ್ತು । ಇನ್ನೇನು ಮಾಡಬೇಕೆಂದು ತಿಳಿಯದು ॥ 82

ಇನ್ನು ಈ ಗದ್ದಲದಿಂದಾಗಿ ।ಮನಗೆ ಹೋಗಬೇಕು ತಿರುಗಿ ।
ನಾಳೆ ಹೋದರಾಯಿತು ಶಿರಡಿಗೆ । ಎಂದಿಬ್ಬರೂ ನಿಶ್ಚಯಿಸಿದರು ॥ 83

ಅಷ್ಟರಲ್ಲಿ ಗಾಡಿಯಗಾರ್ಡ ಸಹಜದೊಳು । ದೀಕ್ಷಿತರ ಗುರುತಿನವನೇ ಹೊರಡಲು ।
ಮೊದಲ ವರ್ಗದಲಿ ಕುಳಿತುಕೊಳ್ಳಲು । ತೊಂದರೆಯಿಲ್ಲದೆ ವ್ಯವಸ್ಥೆ ಮಾಡಿದನವ ॥ 84

ಮುಂದೆ ಬಂಡಿಯಲಿ ಕುಳಿತು ಕೊಳ್ಳಲು । ಮನಸೋಕ್ತನಡೆದವು ಬಾಬಾರ ಸುದ್ದಿಗಳು ।
ಮಾಧವರಾಯರು ಕಥಾಮೃತಾ ನೀಡುತ್ತಿರಲು । ದೀಕ್ಷಿತರು ಆನಂದ ತುಂದಿಲರಾದರು ॥ 85

ಹೀಗೆ ಆ ಮಾರ್ಗವನು ಸುಖದಲಿ ಕ್ರಮಿಸಿದ್ದು । ತಿಳಿಯುಲಿಲ್ಲ ಹೊತ್ತುಹೋದದ್ದು ।
ಕೋಪರಗಾಂವಕ್ಕೆ ನಿಂತಾಗ ಗಾಡಿ ಬಂದು । ಸಂತೋಷ ತುಂಬಿ ಇಳಿದರಿಬ್ಬರೂ ॥ 86

ಸ್ಟೇಶನ್ ಮೇಲೆ ಅದೇ ಸಮಯದಿ । ನಾನಾ ಸಾಹೇಬ ಚಾಂದೋರಕರರನ್ನು ನೋಡಿ ।
ದೀಕ್ಷಿತರು ಅತ್ಯಂತ ಆನಂದಿಂದ । ಪರಸ್ಪರ ಭೆಟ್ಟಿಯಾದರು ಅಕಲ್ಪಿತವಾಗಿ ॥ 87

ಅದರೂ ಬಾಬಾರ ದರ್ಶನಕ್ಕೆಂದು । ಹೊರಟಿದ್ದರು ಶಿರಡಿಗೆಂದು ।
ಆಗ ಈ ಅನಪೇಕ್ಷಿತ ಯೋಗ ಕಂಡು । ವಿಸ್ಮಯಾಪನ್ನರಾದರು ಮೂವರು ॥ 88

ಆಗ ಆ ಮೂವರೂ ಟಾಂಗಾದಲ್ಲಿ ಕುಳಿತರು । ದಾರಿಯಲ್ಲಿ ಗೋದಾವರಿಯ ಸ್ನಾನ ।
ಮುಗಿಸಿಕೊಂಡು । ಪಾವನವಾದ ಶಿರಡಿಗೆ ಮುಟ್ಟಿದರು ॥ 89

ಬಳಿಕ ಆದಾಗ ಸಾಯಿಯ ದರ್ಶನ । ದ್ರವಿಸಿತಾಗ ದೀಕ್ಷಿತರ ಮನ ।
ನಯನಗಳಾದವು ಅಶ್ರುಪೂರ್ಣ । ಸ್ವಾನಂದ ಜೀವನ ಉದುರಿತಲ್ಲಿ ॥ 90

ಬಳಿಕ ಸಾಯಿ ನುಡಿದರು ಸ್ಪಷ್ಟವಾಗೇ । ಶಾಮನನು ಕಳಿಸಿದೆನಲ್ಲಿಗೆ ।
ಅಹಮದನಗರಕ್ಕೆ ನಿನ್ನ ಭೆಟ್ಟಿಗೆ । ನಿನ್ನ ದಾರಿಯ ನೋಡಿ ॥ 91

ದೀಕ್ಷಿತರ ಶರೀರ ರೋಮಾಂಚಿತವಾಯಿತು । ಗಂಟಲು ಕಟ್ಟಿ ಕಣ್ಣೀರಿಳಿಯಿತು ।
ಚಿತ್ತ ಹರ್ಷ ನಿರ್ಭರವಾಯಿತು । ಮೈಯ್ಯೆಲ್ಲ ಬೆವರುಬಿಟ್ಟಿತು ॥ 92

ದೇಹವಾಯಿತು ಸೂಕ್ಷ್ಮ ಕಂಪಾಯಮಾನ । ಚಿತ್ತವೃತ್ತಿ ಸ್ವಾನಂದನಿಮಗ್ನ ।
ನೇತ್ರಗಳಾದವು ಅರ್ಧೋನ್ಮೀಲಿನ । ಆನಂಧಘನ ಆವರಿಸಿತು ॥ 93

ಇಂದೆನ್ನ ದೃಷ್ಟಿಯಾಯಿತು ಸಫಲ । ಎಂದಪ್ಪಿಕೊಂಡರು ಚರಣಗಳ ।
ಮನಕೆ ಧನ್ಯತೆ ಎನಿಸಿ ಬಹಳ । ಆನಂದ ಹಿಡಿಸದಷ್ಟಾಯಿತು ॥ 94

ಮುಂದೆ ವರುಷಗಳೇ ಹೋದವು ಉರುಳಿ । ನಿಷ್ಠೆ ಕುಳಿತಿತು ಸಾಯಿ ಚರಣದಲಿ ।
ಪೂರ್ಣ ಸಾಯಿಯ ಕೃಪಾಪಾತ್ರರಾಗುತಲಿ । ಸೇವೆಗೆ ಅರ್ಪಿಸಿಕೊಂಡರು ನಿಜಕಾಯವ ॥ 95

ಯಥಾಸಾಂಗ ಒಳ್ಳೆಯ ಸೇವೆಯ । ಮಾಡಲೆಂದು ಕಟ್ಟಿಸಿದರು ಮನೆಯ ।
ಬಹುಕಾಲ ಶಿರಡಿಯಲಿ ಮಾಡಿದರು ವಸತಿಯ । ಸಾಯಿಯ ಮಹತಿಯ ಬೆಳೆಸಿದರು ॥ 96

ಸಾರಾಂಶ ಅವನ ಕಾಮನೆ ಹಿಡಿದವನು । ನಿಶ್ಚಯದಿಂದಿವನ ನಿಷ್ಕಾಮ ಮಾಡುವನು ।
ಸಾಯಿ ನಿಜ ಭಕ್ತ ವಿಶ್ರಾಮಧಾಮನು । ಪರಮ ಸುಖದಾಯಕ ಭಕ್ತರಿಗೆ ॥ 97

ಅನೇಕ ಚಕೋರಗಳು ಚಂದ್ರನಿಗೆ । ಆದರೆ ಚಂದ್ರನೊಬ್ಬನೇ ಚಕೋರಗಳಿಗೆ ।
ಅದರಂತೆ ತಾಯಿಗೆ ಮಕ್ಕಳನೇಕ ಇರಬಹುದು । ಆದರೆ ಮಕ್ಕಳಿಗೆ ತಾಯಿ ಒಬ್ಬಳೇ ॥ 98

ದಿನಕರನಿಗೆ ಕುಮುದಿನಿಗಳು ಅಪಾರ । ಆದರೆ ಕುಮುದಿನಿಗಳಿಗೆ ಒಬ್ಬನೇ ದಿನಕರ ।
ನಿನಗೆ ಕೊರತೆಯಿರದು ಭಕ್ತರ । ಆದರೆ ತಂದೆ ನೀನೊಬ್ಬನೇ ಗುರುವರ ॥ 99

ಮೇಘಕ್ಕಾಗಿ ಆತುರವಾಗಿರುವ ಚಾತಕಗಳೆಷ್ಟೊಂದು । ಆದರೆ ಚಾತಕಗಳಿಗೆ ಅಲ್ಲಿರುವದು ಮೇಘವೊಂದು ।
ಹಾಗವನಿಗೆ ಭಕ್ತರನೇಕರಿದ್ದು । ಆದರೆಲ್ಲರ ಜನನೀ ಜನಕನವನೊಬ್ಬನೇ ॥ 100

ಸದ್ಭಾವದೆ ಶರಣ ಬಂದವರು ಸಹಜದಲಿ । ಅವರ ಮಾನವನು ಉಳಿಸುತಲಿ ।
ಪ್ರೀತಿಯಿಂದ ತಾನೇ ಅವರ ಕಾರ್ಯ ಮಾಡುತಲಿ । ಅದನು ಪ್ರತ್ಯಕ್ಷ ನೋಡುತಲಿರುವೆವು ॥ 101

ಜಗದಲಿರುವ ಪ್ರಾಣಿಗಳಿಗೆ ಜೀವಂತ । ಮರಣದಿಂದಾಗುವದವುಗಳ ಅಂತ ।
ಸಾಯಿ ಭಕ್ತರಿಗೆ ಅಭಯ ನೀಡುತ । "ನಾ ನಿನ್ನ ವಿಮಾನದಲ್ಲಿ ಕರೆದೊಯ್ಯುವೆನೆಂದು" । 102

ಹೇಗೆ ಇತ್ತು ಸಾಯಿಯ ಮಾತು । ಹಾಗೆಯೇ ದೀಕ್ಷಿತರಿಗೆ ಮರಣ ಬಂತು ।
ಬಾಯಲ್ಲಿ ಸಾಯಿಯ ಗುಣಗಾನ ನಡೆದಿತ್ತು । ನಾ ನನ್ನ ಕಣ್ಣಿಂದ ನೋಡಿರುವೆ ॥ 103

ಉಗಿಬಂಡಿಯಲ್ಲಿ ಕುಳಿತೆಡೆ । ನಮ್ಮ ನಮ್ಮಲ್ಲಿ ಮಾತು ನಡೆದಿದೆ ।
ವಾರ್ತೆಯೆಲ್ಲ ಸಾಯಿಯದೇ । ಒಮ್ಮೆಲೇ ವಿಮಾನವನೇರಿದಂತೆ ॥ 104

ನೋಡಿರಿ ಅಕಸ್ಮಾತ ಹೇಗೆ ಸಮಯ ಬಂತು । ನನ್ನ ಹೆಗಲ ಮೇಲೆ ತಲೆ ಇಟ್ಟು ।
ವಿಮಾನ ಸಿದ್ಧಿಯೇ ಸಾಧಿಸಿತು । ಅನಂತ ಸೌಖ್ಯದಲಿ ಲೀನರಾದ ದೀಕ್ಷಿತರಿಗೆ ॥ 105

ಮೈ ಮುರಿಯಲಿಲ್ಲ ಒದ್ದಾಟವಿಲ್ಲ। ಘೋರಘೋರವಿಲ್ಲ ನೋವಿಲ್ಲ ।
ಮಾತಾಡುತ್ತ ಕುಳಿತಾಗ ನೋಡುತಿರುವಂತೆ ಜನರೆಲ್ಲ । ಶರೀರ ನಿಶ್ಚಲವಾಯಿತಲ್ಲಿ ॥ 106

ಮಾನವ ಭೂಮಿಯ ಹೀಗೆ ವಿಸರ್ಜಿಸಿ । ನಿಜರೂಪದಲಿ ನಿಜಜ್ಯೋತಿಯ ಬೆರೆಸಿ ।
ವಿಮಾನ ಮಾರ್ಗದಲಿ ನಿಜರೂಪದಲಿ ಸ್ಥಾಪಿಸಿ । ಜ್ಯೋತಿಯಲಿ ನಿಜಜ್ಯೋತಿಯು ಲೀನವಾಯಿತು ॥ 107

ಸಾಯಿ ಚರಣದಲಿ ಲೀನವಾಗಲು ಮನ । ಕಳೆದು ಹೋಯಿತು ಪೂರ್ಣ ದೇಹಾಭಿಮಾನ ।
ವೃತ್ತಿ ಹೊಂದಿತು ಸಮಾಧಾನ । ಪೂರ್ಣ ಕೃಷ್ಣಾರ್ಪಣ ದೇಹವು ॥ 108

ಶಕೆ ಹದಿನೆಂಟು ನೂರಾನಲವತ್ತೆಂಟು । ಜೇಷ್ಠ ವದ್ಯ ಏಕಾದಶಿ ಇತ್ತು ।
ಆಗ ದೀಕ್ಷಿತರು ಈ ಕರ್ಮಭೂಮಿಯ ಬಿಟ್ಟು । ಬ್ರಹ್ಮಪದವ ಹೊಂದಿದರು ॥ 109

ಎನ್ನಿರಿದಕೆ ಅವರ ದೇಹಾವಸಾನ । ಅಥವಾ ಬಂದಿತವರ ಕರೆಯಲು ವಿಮಾನ ।
ಆದರವರು ಸಾಯಿ ಪದದಲಿ ಲೀನ । ಯಾರಿಗೂ ಪ್ರಮಾಣ ಈ ಮಾತು ॥ 110

ಇಂಥ ಉಪಕಾರವ ತೀರಿಸಬೇಕನ್ನುವ । ಭಕ್ತನಲ್ಲಿ ಅವ ಪೂರ್ಣ ಅಭಕ್ತನಾಗಿರುವ ।
ದೃಶ್ಯದಾನದಿಂದ ಇಂಥ ಉಪಕಾರವ । ತೀರಿಸುವದು ಕನಸಿನಲೂ ಸಾಧ್ಯವಿಲ್ಲ ॥ 111

ಚಿಂತಾಮಣಿಯ ಕೊಡುವಿರಿ । ನಿತ್ಯ ಚಿಂತೆಯನೆ ಬೆಳೆಸುವಿರಿ ।
ಅಚಿಂತ್ಯದಾನಿಯದು ತೀರಿಸಬಲ್ಲಿರಿ । ಉಪಕಾರವೆನ್ನುವುದು ಹುಡುಗಾಟದ ಮಾತು ॥ 112

ಗುರುವಿನುಪಕಾರ ತೀರಿಸಲೆಂದು । ಕಲ್ಪತರುವನೇ ಕೊಡಬಹುದು ।
ನಿರ್ವಿಕಲ್ಪ ದಾನಿಯಾದ ಗುರುವಿನದು । ಉಪಕಾರ ತೀರಿದಂತಾದೀತೇ ॥ 113

ಇದೆಲ್ಲಕ್ಕಿಂತ ಹೆಚ್ಚಿನದು । ಗುರುವಿಗೆ ಸ್ಪರ್ಶ ಮಣಿಯ ಕೊಡಬಹುದು ।
ಅದರಿಂದ ಲೋಹ ಸುವರ್ಣವಾಗುವದು । ಆದರೆ ಗುರುಬ್ರಹ್ಮರಸವನ್ನೇ ಕುಡಿಸುವ ॥ 114

ಕಾಮಧೇನುವ ಅರ್ಪಿಸಿ ಗುರುವಿಗೆ । ಎನಬಹುದು ಆಯಿತು ಗುರುವಿನುಪಕಾರ ತೀರಿಸಿದ ಹಾಗೆ ।
ಕಾಮನೆಗಳದತ್ಯಂತ ಆಗಬಹುದು ಬೆಳವಣಿಗೆ । ಗುರುವಿರುವ ನಿಷ್ಕಾಮ ನಿರಾಯಾಸ ದಾನಿ ॥ 115

ಸಂಪೂರ್ಣ ವಿಶ್ವದಲ್ಲಿಯ ಸಂಪತ್ತು । ಗುರುವಿನ ಉಪಕಾರ ತೀರುಸುವೆನೆಂದು ಕೊಟ್ಟು ।
ಅಮಾಯಕ ದಾತೃವಿಗೆ ಮಾಯೆಯನಿತ್ತು । ಅದರಿಂದ ಉತ್ತೀರ್ಣರಾಗಬಹುದು ॥ 116

ಗುರುವಿನ ಮೇಲೆ ದೇಹವ ನಿವಾಳಿಸುವುದು । ಆದರೆ ಕೇವಲ ನಶ್ವರವೇ ಅದೂ ।
ಜೀವವನೇ ನಿವಾಳಿಸಬೇಕೆಂದರೆ ಅದೂ । ತಾನೇ ಮಿಥ್ಯಾ ಇರುವದು ॥ 117

ಸತ್ಯ ವಸ್ತುವಿನ ದಾತೃ ಸದ್ಗುರು । ಅಂಥವಗೆ ಮಿಥ್ಯಾ ವಸ್ತುವನಿತ್ತರೂ ।
ಹೇಗೆ ಉತ್ತೀರ್ಣನಾಗುವ ಅದರಿಂದಾದರೂ । ಈ ಮಾತು ಅಶಕ್ಯವಾಗಿದೆ ॥ 118

ಅದಕೆ ಅನನ್ಯ ಶ್ರದ್ಧಾ ಪೂರ್ಣರಾಗಿ । ಉದ್ದಕೆ ನಮಸ್ಕಾರ ಹಾಕಿ ।
ಉಪಕಾರ ಸ್ಮರಣ ಪೂರ್ವಕವಾಗಿ । ಸದ್ಗುರು ಚರಣದಲಿ ಶಿರವನಿಡಬೇಕು ॥ 119

ಅಖಂಡ ಗುರುವಿನ ಉಪಕಾರ ಸ್ಮರಿಸುವುದು । ಶಿಷ್ಯನಿಗೆ ಭೂಷಣವಾಗಿದೆ ಇದು ।
ಶಿಷ್ಯನು ನಿಜ ಸುಖವನೇ ಕಳೆದು ಕೊಳ್ಳುವನು । ಗುರುವಿನುಪಕಾರ ತೀರಿಸುವೆನೆಂದರೆ ॥ 120

ಕಥೆ ಕೇಳಲು ಇಲ್ಲಿಯವರೆಗೆ । ತೃಷೆ ಹೆಚ್ಚಿತು ಕೇಳುಗರಿಗೆ ।
ಸಣ್ಣ ಕಥೆಯನೊಂದು ಹೇಳುವೆನವರಿಗೆ । ಅವರ ಜಿಜ್ಞಾಸೆ ಪೂರ್ಣ ಆತುರತೆ ನೋಡಿ ॥ 121

ತಮ್ಮ ಬಂಧು ಪ್ರೇಮವನು ಸಂತರೂ । ಸಂಸಾರಿಗಳಂತೆಯೇ ವ್ಯಕ್ತ ಮಾಡುವರು ।
ಅಥವಾ ಅದರ ಮರ್ಮವ ತಿಳಿಸುವರು । ಲೋಕ ಸಂಗ್ರಹ ದಕ್ಷರಾಗಿ ॥ 122

ಅಥವಾ ಸ್ವತಃ ಸಾಯಿಯೇ ತಾನು । ಮಾಡಲು ನಿಜ ಭಕ್ತ ಕಲ್ಯಾಣವನು ।
ಆ ಭೂಮಿಕೆಗಳನು ತಾನೇ ನಟಿಸುವನು । ಪರಮಾರ್ಥ ಶಿಕ್ಷಣ ಕೊಡುವಾಗ ॥ 123

ಈ ಅರ್ಥದ ಚಿಕ್ಕ ಕಥೆಯೊಂದು । ಶ್ರೋತೃಗಳು ಚಿತ್ತವಿಟ್ಟು ಕೇಳುವದು ।
ಏನೂ ಹೇಳದೆಯೇ ತಿಳಿಯುವದು । ಸಂತರಿಗೆ ಸಂತರ ನಿಜಗುರುತು ॥ 124

ಒಮ್ಮೆ ಗೋದಾವರಿ ತಟದಲಿ । ಪ್ರಸಿದ್ಧ ರಾಜಮಹೇಂದ್ರಿ ಶಹರದಲ್ಲಿ ।
ಶ್ರೀ ವಾಸುದೇವಾನಂದರು ಬಂದರಲ್ಲಿ । ಸರಸ್ವತಿಯೆಂಬ ಉಪನಾಮದಿಂದ ॥ 125

ಬಹಳ ದೊಡ್ಡ ಅಂತರ್ಜ್ಞಾನಿಗಳು । ಕರ್ಮ ಮಾರ್ಗದ ಕಡು ಅಭಿಮಾನಿಗಳು ।
ಎಲ್ಲೆಲ್ಲೂ ಪಸರಿಸಿತ್ತು ಕೀರ್ತಿ ಅವನಿಯೊಳು । ಅಖಂಡವಾಗಿ ಅವರದು ॥ 126

ಕರ್ಣೋಪಕರ್ಣವಾಗಿ ವಾರ್ತೆ ಹರಡಿದ್ದರಿಂದ । ಪುಂಡಲೀಕರಾವ ಮೊದಲಾದ ।
ಉದ್ದೇಶವಿಟ್ಟುಕೊಂಡು ದರ್ಶನದ । ನಾಂದೇಡ ಪಟ್ಟಣದ ಜನರೆಲ್ಲ ॥ 127

ಹೊರಟರಲ್ಲಿಂದ ಎಲ್ಲ ಜನರು । ರಾಜಮಹೇಂದ್ರಿಗೆ ಬಂದರು ।
ಗೋದಾತೀರಕ್ಕೆ ಬೆಳಗಿನಲಿ । ಸ್ವಾಮಿಯ ದರ್ಶನಕೆ ಬಂದರು ॥ 128

ಸುಪ್ರಭಾತದ ಸಮಯವಿತ್ತು । ನಾಂದೇಡದಿಂದ ಬಂದ ಜನ ಯಾವತ್ತೂ ।
ಸ್ನಾನಕ್ಕೆ ನದಿಯತ್ತ ಹೊರಟಿತು । ಸ್ತೋತ್ರ ಪಠಿಸುತ್ತ ಸುಸ್ವರವಾಗಿ ॥ 129

ಕಂಡು ಸ್ವಾಮಿಗಳಲ್ಲೇ ನಿಂತಿರುವದಾಗಿ । ಸದ್ಭಾವದಿಂದವರಿಗೆ ಸಾಷ್ಟಾಂಗವೆರಗಿ ।
ಸಹಜ ಕುಶಲ ಪ್ರಶ್ನೆ ಕೇಳುತಿರಲಾಗಿ । ಶಿರಡಿಯ ಸುದ್ದಿ ಬಂದಿತು ॥ 130

ಕಿವಿಗೆ ಬಿದ್ದಾಗ ಸಾಯಿ ನಾಮ । ಎರಡು ಕೈ ಮುಗಿದು ಮಾಡಿದರು ಪ್ರಣಾಮ ।
ಎಂದರವರೆಮ್ಮ ಬಂಧುಗಳು ನಿಷ್ಕಾಮ । ನಿಃಸ್ಸೀಮ ಪ್ರೀತಿ ಎಮಗವರದು ॥ 131

ಒಂದು ಶ್ರೀಫಲವ ತೆಗೆದುಕೊಂಡು । ಪುಂಡಲೀಕರಾಯರ ಕೈಗೆ ಕೊಟ್ಟು ।
ಎಂದರು ಶಿರಡಿಗೆ ಹೋದಾಗಿದನರ್ಪಿಸುವದು । ಬಂಧು ಪದಕಮಲಗಳ ವಂದಿಸಿ ॥ 132

ನನ್ನ ನಮಸ್ಕಾರಗಳವರಿಗೆ ಹೇಳಿ । ಹೇಳಿರಿ ಈ ದೀನನ ಮೇಲವರ ಕೃಪೆಯಿರಲಿ ।
ಇವನ ಮರೆವೆಂದೂ ಆಗದಿರಲಿ । ನಿರಂತರ ಪ್ರೇಮ ವರ್ಧಿಸುತಲಿ ॥ 133

ನೀವು ಶಿರಡೀ ಊರಿಗೆ । ಮತ್ತೊಮ್ಮೆ ಯಾವಾಗಾದರೂ ಹೋದಾಗ್ಯೆ ।
ಅರ್ಪಿಸಿರಿದನು ನನ್ನ ಬಂಧುವಿಗೆ । ಆದರದಿಂದ ನೆನಪಿಟ್ಟುಕೊಂಡು ॥ 134

ನಾವು ಸ್ವಾಮಿಗಳು ಯಾರಿಗೂ ವಂದಿಸಬಾರದು ಎಂದು ನಮಗೆ ಈ ನಿಬಂಧನೆಯಿದ್ದೂ ।
ಆ ನಿಯಮದ ಉಲ್ಲಂಘಿಸುವದು । ಕೆಲ ಪ್ರಸಂಗದಲಿ ಕಲ್ಯಾಣಕಾರಕ ॥ 135

ಅದಕೆ ತೆಗೆದುಕೊಳ್ಳುವಾಗ ಸಾಯಿ ದರ್ಶನ । ಆಗಗೊಡದಿರಿ ಇದರ ವಿಸ್ಮರಣ ।
ಸಾಯಿ ಪದದಲಿ ಶ್ರೀಫಲದ ಅರ್ಪಣ । ನೆನಪಿಟ್ಟುಕೊಂಡು ಮಾಡಬೇಕು ॥ 136

ಅವರ ಈ ವಚನಗಳನಾಲಿಸಿ । ಪುಂಡಲೀಕರಾಯರವರ ಚರಣಗಳ ವಂದಿಸಿ ।
ಎಂದರು ಸ್ವಾಮಿಯ ಅನುಜ್ಞೆಯನನುಸರಿಸಿ । ಹಾಗೆಯೇ ಮಾಡುವೆ ನಿಶ್ಚಯದಿ ॥ 137

ಆಜ್ಞೆಯನು ಮಾಡಿ ಶಿರಸಾಮಾನ್ಯ । ಇದರಿಂದ ನಾ ತಮ್ಮನು ತಿಳಿಯುವೆ ಧನ್ಯ ।
ಸ್ವಾಮಿಗಳಿಗೆ ಶರಣಾಗಿ ಅನನ್ಯ । ಹೊರಟರಲ್ಲಿಂದ ಪುಂಡಲೀಕರಾವ ॥ 138

ಸ್ವಾಮಿಗಳು ಬಾಬಾಗೆ ಬಂಧುವೆಂದರು । ನಿರರ್ಥಕವಿದ್ದೀತೇ ಅದೇನಾದರೂ ।
'ಯಾವಜ್ಜೀವಂ ಅಗ್ನಿಹೋತ್ರಂ ಜುಹುಯಾತ್' ಎಂಬರು । ಬಾಬಾ ಅದರಂತೆಯೇ ವರ್ತಿಸುತಿದ್ದರು ॥ 139

ಯಾವುದಕೆ ಜನರೆನ್ನುತಿದ್ದರು 'ಧುನಿ' ಅಂತ । ಅದು ಬಾಬಾರ ಸಮ್ಮುಖದಲ್ಲಿ ನಿತ್ಯ ।
ಅಷ್ಟ ಪ್ರಹರವಿರುತಿತ್ತು ಪ್ರಜ್ವಲಿತ । ಇದು ಬಾಬಾರ ವ್ರತವಿದ್ದೀತು ॥ 140

ಅಗ್ನಿ ಹೋತ್ರಾದಿ ಸಾಧನಗಳು । ಚಿತ್ತ ಶುದ್ಧಿ ದ್ವಾರದಂತಿರಲು ।
ಬ್ರಹ್ಮಪ್ರಾಪ್ತಿಗಾಗಿ ಧರಿಸುತಿರಲು । ಲೋಕ ಸಂಗ್ರಹಕಾರಣವದಕೆ ॥ 141

ವಾಸುದೇವಾನಂದ ಸರಸ್ವತಿಯವರು । ಅವರೂ ಯತಿಗಳು ವ್ರತಸ್ಥರು ।
ಬಳಿಕವರು ಬಾಬಾರ ಬಂಧುವೆನ್ನುವರು । ಆ ಮಾತು ನಿರರ್ಥಕವಾದದ್ದೇ ? ॥ 142

ತಿಂಗಳು ಕಳೆದಿರಲಿಲ್ಲ ಇನ್ನೂ । ಜೊತೆಗೆ ಕರೆದುಕೊಂಡು ನಾಲ್ಕು ಜನ ಮಿತ್ರರನು ।
ಪಡೆಯವ ಸಾಯಿಯ ದರ್ಶನವನು । ಪುಂಡಲೀಕರಾಯರಿಗೆ ಯೋಗ ಒದಗಿತು ॥ 143

ಜೊತೆಗೆ ತೆಗೆದುಕೊಂಡರು ಹಣ್ಣು ಹಂಪಲುಗಳು । ನೆನಪಿನಿಂದ ತೆಗೆದುಕೊಂಡರು ಶ್ರೀಫಲ ।
ಸಾಯಿ ದರ್ಶನಕೆ ಹೊರಟರೆಲ್ಲ । ಆನಂದದಿ ಶುದ್ಧ ಮನಸ್ಸಿನಿಂದ ॥ 144

ಮುಂದೆ ಮನಮಾಡದಲ್ಲಿ ಇಳಿದ ಮೇಲೆ । ಕೋಪರಗಾಂವದ ಗಾಡಿ ಬಿಟ್ಟ ಮೇಲೆ ।
ಸ್ವಲ್ಪ ಅವಕಾಶವಿದ್ದುದದರಿಂದ ಹಳ್ಳದಲೆ । ನೀರು ಕುಡಿಯಲೆಂದು ಹೋದರು ॥145

ಬರಿ ಹೊಟ್ಟೆಯಿಂದ ನೀರು ಕುಡಿಯುವದು । ಆರೋಗ್ಯಕ್ಕೆ ಹಾನಿಕರವೆಂದು ।
ತಂದರೊಬ್ಬರು ಪೊಟ್ಟಣವೊಂದು । ಬಾಯಾಡಿಸಲೆಂದು ಅವಲಕ್ಕಿಯದು ॥ 146

ಬಾಯಿಗೆ ಹಾಕಿದಾಗ ಒಂದು ತುತ್ತು । ಅವಲಕ್ಕಿ ಅತ್ಯಂತ ಖಾರ ಹತ್ತಿತು ।
ಪ್ರಯತ್ನವೆಲ್ಲ ವ್ಯರ್ಥವಾದಂತೆನಿಸಿತು । ಇದರ ಜೊತೆಯಲಿ ಕೊಬ್ಬರಿ ಇಲ್ಲದೆ ॥ 147

ಆಗ ಅವರಲ್ಲೊಬ್ಬನೆಂದುದು । ಉಪಾಯ ಹೊಳೆದಿದೆ ನನಗೊಂದು ।
ಕಾಯಿಯೊಡೆದು ಅವಲಕ್ಕಿಯಲಿ ಬೆರೆಸುವದು । ಆಗ ನೋಡಿರಿ ರುಚಿ ಅವಲಕ್ಕಿಯದು ॥ 148

ಕಾಯಿ ಎಂದಾಗ ಕಾಯಿ ತಯಾರಿತ್ತು । ಅದನು ಒಡೆಯಲು ಅವಕಾಶವೆಷ್ಟು ।
ಕೂಡಿಸಿದಾಗ ಅವಲಕ್ಕಿ ರುಚಿ ಹತ್ತಿತು । ತಿಂದು ಮೇಲೆ ನೀರು ಕುಡಿದರು ॥ 149

ಕಾಯಿ ಎಂದಾಗ ಕಾಯಿ ಸಿಕ್ಕಿದ್ದು । ಕೇಳಲಿಲ್ಲಾರು ಅದು ಯಾರದೆಂದು ।
ಗದ್ದಲ ಹಿಡಿದಿತ್ತು ಹಸಿವೆಯದು । ಮರೆತಿತು ಉಳಿದದ್ದೆಲ್ಲ ಎಲ್ಲರಿಗೆ ॥ 150

ಬಳಿಕ ಹೋದರು ನಿಲ್ದಾಣದೊಳಗೆ । ಕುಳಿತರು ಕೋಪರಗಾವದ ಬಂಡಿಯೊಳಗೆ ।
ಆಗ ಪುಂಡಲೀಕರಾಯರಿಗೆ । ನೆನಪಾಯಿತು ತಮ್ಮ ಟೆಂಗಿನಕಾಯಿಯದು ॥ 151

ನೋಡಿ ಶಿರಡಿ ಹತ್ತಿರ ಬಂದುದು । ಪುಂಡಲೀಕರಾಯರು ತಳಮಳಿಸುತಿದ್ದು ।
ವಾಸುದೇವಾನಂದರದೇ ಕಾಯಿ ತಂದು । ಅವಲಕ್ಕಿಯಲಿ ಬೆರೆಸಲಾಗಿತ್ತು ತಪ್ಪಿ ॥ 152

ತಿಳಿದಾಗ ಅದೇ ಕಾಯಿಯ ಒಡೆಯಿತು । ಪುಂಡಲೀಕಾರಾಯರಿಗೆ ಭಯವಾಯಿತು ।
ಮೈಯಲ್ಲಿ ನಡುಕ ಹುಟ್ಟಿತು । ಸಂತರ ಅಪರಾಧ ಮಾಡಿದೆನೆಂದು ॥ 153

ಅವನಿಗೆ ಬಹಳ ಸಂತಾಪವಾಯಿತು । ತನ್ನಿಂದೆಂಥ ಪಾಪವಾಯಿತು ।
ಇದರಿಂದೆನಗೆ ಸ್ವಾಮಿಯ ಶಾಪ ತಟ್ಟೀತು । ಆಗ ನಾನಾಡಿದ್ದೆಲ್ಲ ವ್ಯರ್ಥ ಮಾತಾಯಿತು ॥ 154

ಶ್ರೀಫಲದ ಗತಿ ಹೀಗೆ । ಆಗಿ ದೊಡ್ಡ ಮೋಸವಾಯಿತೆನಗೆ ।
ಪುಂಡಲೀಕರಾಯರು ಮನದೊಳಗೇ । ವಿಸ್ಮಯದಿಂದ ತಟಸ್ಥರಾದರು ॥ 155

ಬಾಬಾರಿಗೆ ಇನ್ನೇನು ಕೊಡಲಿ । ಹೇಗೆ ಅವರಿಗಿದನ್ನು ತಿಳಿಸಲಿ ।
ಅವರಿಗೆ ಮುಖವನ್ನಾದರೂ ಹೇಗೆ ತೋರಿಸಲಿ । ಶ್ರೀಫಲ ಕಳಕೊಂಡು ಕುಳಿತೆನಲ್ಲ ॥156

ಸಾಯಿ ಚರಣಕೆ ಅರ್ಪಿಸಬೇಕಾದುದು । ಫಲಾಹಾರ (ಉಪಹಾರ)ವಾಯಿತಲ್ಲ ಅದರದು ।
ಪುಂಡಲೀಕರಾಯರು ಮನದಲಿನೊಂದು । ಎಂದರು ಇದು ಅಪಮಾನ ಸಂತರದು ॥157

ಇನ್ನು ಯಾವಾಗ ಬಾಬಾ ಕಾಯಿ ಬೇಡುವರು । ಆಗ ಎಲ್ಲರೂ ಅಧೋವದನರಾಗುವರು ।
ಮನಮಾಡದಲದನು ತಿಂದರು । ಎಂಬುದರ ಕಳವಳ ಎಲ್ಲರಿಗೆ ॥ 158

ಇಂದು ಕಾಯಿ ಹತ್ತಿರವಿರದು । ನಿಜ ಹೇಳಬೇಕೆಂದರೆ ನಾಚಿಕೆ ಬರುವದು ।
ಸುಳ್ಳು ಮಾತಲ್ಲಿ ನಡೆಯದು । ಸಾಯಿ ಮಹಾರಾಜರು ಸರ್ವಸಾಕ್ಷಿಗಳು ॥ 159

ಹೀಗಿರಲು ಸಾಯಿದರ್ಶನ ತೆಗೆದುಕೊಂಡು । ಜನರೆಲ್ಲ ಸಂತುಷ್ಟರಾಗಿದ್ದು ।
ಆನಂದಾಶ್ರುಗಳು ಕಣ್ಣಿಗೆ ಬಂದು । ಪ್ರಸನ್ನವದನರೆಲ್ಲರೂ ॥ 160

ಇನ್ನು ಹಗಲಿರುಳೂ ನಾವು । ತಂತಿ ಇಲ್ಲದೇ ಸಂದೇಶ ಕಳಿಸುತಿರುವೆವು ।
ಅದರ ಜಂಭವನೀಗ ತೋರಿಸುವೆವು । ಎಂದರು ಅಭಿಮಾನವಶರಾಗಿ ॥ 161

ಯಾವುದಕ್ಕೆ ಅಪಾರ ಹಣದ ವೆಚ್ಚದಿಂದ । ಅಲ್ಲಲ್ಲಿ ಕಂಭ ನೆಡಬೇಕಾಗುವದ ।
ಬಿಟ್ಟು ಈ ಸಂತರು ಸಂದೇಶ ಕಳಿಸುವರಂತೆ ಮನದಿಂದ । ಸಾಧನಗಳೇನೂ ಇಲ್ಲದಲೇ ॥ 162

ಸ್ವಾಮಿಯವರು ಪುಂಡಲೀಕರಾಯರಿಗೆ । ಕಾಯಿ ಕೊಟ್ಟ ಸಮಯದೊಳಗೆ ।
ಕಳಿಸಿದ್ದರು ಸಾಯಿನಾಥರಿಗೆ । ತಂತಿ ಇಲ್ಲದ ಸಂದೇಶವನು ॥ 163

ಪುಂಡಲೀಕರಾಯ ದರ್ಶನ ತೆಗೆದುಕೊಂಡಾಗ । ಬಾಬಾ ತಾವಾಗಿಯೇ ಕೇಳಿದರವಗ ।
"ನನ್ನ ವಸ್ತುವ ಕೊಡು ನನಗೆ । ನನ್ನ ಬಂಧುವಿನ ಹತ್ತಿರ ತಂದದ್ದು" ॥ 164

ಬಳಿಕ ಪುಂಡಲೀಕರಾಯ ಖಿನ್ನರಾಗಿ । ಬಾಬಾರ ಚರಣಗಳ ಹಿಡಿದು ಗಟ್ಟಿಯಾಗಿ ।
ಇಲ್ಲೆನಗೆ ಉಪಾಯ ಕ್ಷಮೆಯ ಹೊರತಾಗಿ । ನಾನೇನು ಹೇಳಲಿನ್ನು ದೇವಾ ॥ 165

ನನಗೆ ಕಾಯಿಯು ನೆನಪಿತ್ತು । ಆದರೆ ಹಸಿವೆ ಹಿಂಗಿಸಬೇಕಿತ್ತು ।
ಅದರಿಂದೆಲ್ಲರಿಗೆ ಮರೆತು ಹೋಯಿತು । ಹಳ್ಳದ ದಂಡೆಗೆ ಹೋದಾಗ ॥ 166

ಅಲ್ಲಿ ತಿನ್ನುವಾಗ ಅವಲಕ್ಕಿಯನು । ಬೆರೆಸಿದೆವದರಲಿ ಒಡೆದು ಆ ಕಾಯಿಯನು ।
ಅದಕೆ ಇನ್ನೊಂದು ಕಾಯಿಯ ತರುವೆನು । ನಿಶ್ಚಲ ಮನದಿಂದದನು ಸ್ವೀಕರಿಸಬೇಕು ॥167

ಹೀಗೆಂದು ಹೇಳತೊಡಗಲು । ಪುಂಡಲೀಕರಾಯ ಕಾಯಿ ತರಲು ।
ಸಾಯಿ ಮಹಾರಾಜರು ಅವನ ಕೈ ಹಿಡಿದು ತಡೆಯುತಿರಲು । ಎಲ್ಲರೂ ನೋಡುತಿದ್ದರು ॥ 168

ಅಪರಾಧವಾಯಿತು ತಿಳಿಯದಲಿ । ದಯಾಳುಗಳಾದ ತಾವು ಹಾಕಿಕೊಳ್ಳಿರಿ ಉಡಿಯಲಿ ।
ಕ್ಷಮಿಸಿ ಕೃಪಾವಂತರಾಗುತಲಿ । ನಾನಿರುವೆ ನಿತಾಂತ ಅಪರಾಧಿ ॥ 169

ಸ್ವಾಮಿಗಳಂಥ ಸಾಧೂ ಸಜ್ಜನ । ಅವಗಣಿಸಿ ಅಂಥವರ ವಚನ ।
ಮಾಡಬೇಕಾದ್ದನ್ನು ತಮಗೆ ಅರ್ಪಣ । ಆ ಫಲವೆ ಭಕ್ಷಣ ಮಾಡಿದೆನಲ್ಲಾ ॥ 170

ಸಂತರ ವಚನಗಳ ಮೀರಿದಂತಿದು । ಎಂಥ ಅಪರಾಧ ನನ್ನಿಂದಾದುದು ।
ಈ ಪಾಪಕ್ಕೆ ಉಪಶಮನವೇನಿರುವದು । ಎಂಥ ಲಜ್ಜಾಹೀನನಾದೆ ನಾನು ॥ 171

ಆಗ ಕೇಳಿ ಈ ಮಾತು । ಸಾಯಿನಾಥ ನುಡಿದರು ನಕ್ಕು ।
"ಕಾಯಿಯ ಕೈಯಲ್ಲೇಕೆ ತೆಗೆದುಕೊಳ್ಳಬೇಕಾಗಿತ್ತು । ಸರಿಯಾಗಿ ಅದನಿಡದಿರದಲ್ಲಿ" ॥ 172

ನೀವು ನನ್ನ ವಸ್ತುವನ್ನು ನನಗೆ । ನಿಶ್ಚಿತವಾಗಿ ಕೊಡುವಿರೆನ್ನುವ ಮಾತಿಗೆ ।
ನಂಬಿ ನನ್ನ ಬಂಧುವು ನಿಮ್ಮ ಕೈಗೆ । ಅತ್ಯಂತ ವಿಶ್ವಾಸದಿಂದದ ಕೊಟ್ಟನು ॥ 173

ಆಗಬೇಕೇ ಹೀಗದರ ಪರಿಣಾಮ । ಇದೇ ತಾನೇ ತಾವು ಇರುವದು ವಿಶ್ವಾಸಧಾಮ ।
ಪೂರೈಸಲಿಲ್ಲೆನ್ನ ಬಂಧುವಿನ ಕಾಮ । ಇಂಥದೇ ಏನು ನಿಮ್ಮ ಕೆಲಸ" ॥ 174

ಎಂದರು "ಆ ಫಲದ ಯೋಗ್ಯತೆ । ಬರಲಾರದು ಎಷ್ಟೇ ಕೊಟ್ಟರೂ ಮತ್ತೆ ।
ಇನ್ನೇತಕೆ ವ್ಯರ್ಥ ದುಶ್ಚಿತತೆ । ಆಗುವದು ಆಗಿ ಹೋದ ಮೇಲೆ ॥ 175

ಸ್ವಾಮಿ ನಿನಗೆ ಕಾಯಿ ಕೊಟ್ಟದು । ಅದೂ ಕೇವಲ ನನ್ನದೇ ಸಂಕಲ್ಪವಿರುವದು ।
ನನ್ನ ಸಂಕಲ್ಪದಿಂದಲೇ ಆ ಕಾಯಿ ಒಡೆದುದು । ನಿಷ್ಫಲ ಅಭಿಮಾನವೇಕೆ ನಿನಗೆ ॥176

ಹಿಡಿದು ಅಹಂಕಾರದ ಬುದ್ಧಿ । ಅದರಿಂದ ಎಂದುಕೊಳ್ಳುವೆ ನೀ ಅಪರಾಧಿ ।
ಇಷ್ಟು ನಿರಹಂಕರ್ತೃತ್ವ ಹಿಡಿ । ಅದರಿಂದೆಲ್ಲ ಉಪಾಧಿಗಳು ತೊಲಗುವವು ॥ 177

ಪುಣ್ಯದ್ದು ಮಾತ್ರ ಏಕೆ ಅಬಿಮಾನ । ಏಕೆ ಹಿಡಯಲಾರೆ ಪಾಪದ ಅಭಿಮಾನ ।
ಎರಡರ ಪ್ರತಾಪವೂ ಸರಿಸಮಾನ । ಅದಕೆ ನಿರಭಿಮಾನನಾಗಿರಬೇಕು ॥ 178

ನನ್ನ ದರ್ಶನ ಲಭಿಸಲಿ ನಿನಗೆ । ನನಗೆ ಎನಿಸಿದ್ದರಿಂದಲೇ ಹೀಗೆ ।
ಆಗಲೇ ಕಾಯಿ ನಿನ್ನ ಕೈಯೊಳಗೆ । ಬಿತ್ತೆಂಬುದು ತ್ರಿವಾರ ಸತ್ಯ ॥ 179

ನೀವಾದರೂ ನನ್ನವೇ ಮಕ್ಕಳು । ಕಾಯಿ ಬೀಳಲು ನಿಮ್ಮ ಮುಖದೊಳು ।
ಅದೇ ನೀವೆನಗೆ ಅರ್ಪಿಸಿದೊಲು । ತಿಳಿಯಿರದು ನನಗೆ ಮುಟ್ಟಿತೆಂದು" ॥ 180

ಸಾಯಿಯು ತಿಳಿಸಿ ಹೇಳಲು ಹೀಗೆ । ಆಗ ಪುಂಡಲೀಕರಾಯನ ಮನಸಿಗೆ ।
ಸಾಯಿ ಮುಖದ ವಚನದಿಂದ ಮೆಲ್ಲಗೆ । ಉದ್ವಿಗ್ನತೆ ಕರಗತೊಡಗಿತು ॥ 181

ಕಾಯಿ ಹೋದ ನಿಮಿತ್ತವಾಗಿ । ಉಪದೇಶದಿಂದ ಉದ್ವಿಗ್ನ ಮನ ಶುದ್ಧವಾಗಿ ।
ಈ ರೀತಿ ಇದ್ದವರು ಅಹಂಕಾರಯುತರಾಗಿ । ಅಭಿಮಾನ ನಿರ್ಮುಕ್ತ ನಿರ್ದೋಷಿಗಳಾದರು ॥ 182

ಇಷ್ಟೇ ಈ ಕಥೆಯ ಸಾರ । ವೃತ್ತಿಯಾದಾಗ ನಿರಹಂಕಾರ ।
ಪರಮಾರ್ಥದಲಿ ಲಭಿಸುವದು ಅಧಿಕಾರ । ಸಹಜ ಭವಪಾರುಗಾಣುವಿರಿ ॥ 183

ಇನ್ನು ಮೂರನೆಯ ಭಕ್ತನದು ಅಭಿನವ । ಶ್ರವಣ ಮಾಡಿರಿ ಈ ಮಧುರ ಅನುಭವ ।
ಕಂಡು ಬರುವದಲ್ಲಿ ಬಾಬಾರ ಅತುಲ ಅನುಭವ । ಸಾಮರ್ಥ್ಯ ಗೌರವಗಳೊಂದಾಗಿ ॥ 184

ಬಾಂದ್ರೆ ಎಂಬ ತಾಲೂಕಿನಲ್ಲಿ । ಉತ್ತರಕ್ಕೆ ಬಾಂದ್ರೆ ಪಟ್ಟಣದ ಮಗ್ಗುಲಲ್ಲಿ ।
ಸಾಂತಾಕ್ರೂಜ ಎಂಬಲ್ಲಿ । ಇರುತಿದ್ದರು ಧುರಂಧರರೆಂಬ ಹರಿಭಕ್ತರು ॥ 185

ಸಂತ ಪ್ರೇಮವೆಲ್ಲ ಬಂಧುಗಳಲ್ಲಿ । ಅವರ ದೃಢವಾದ ನಿಷ್ಠೆ ಶ್ರೀರಾಮನಲಿ ।
ಅನನ್ಯ ಶ್ರದ್ಧೆ ರಾಮನಾಮದಲ್ಲಿ । ಸಲ್ಲದ ಉಸಾಬರಿ ಹಿಡಿಸುತಿರಲಿಲ್ಲ ॥ 186

ಸರಳವಾಗಿತ್ತವರ ಜೀವನ ಸರಣಿ । ಅದರಂತೆ ಮಕ್ಕಳೂ ಮರಿಗಳಿಗೂ ಅದೇ ಅನುಕರಣೆ ।
ಸ್ತ್ರೀಯರದೂ ನಿರ್ದೋಷ ಆಚರಣೆ । ಚಕ್ರಪಾಣಿಯೂ ಋಣಿ ಅವರಿಗೆ ಅದರಿಂದ ॥ 187

ಬಾಳಾರಾಮನೂ ಅವರಲ್ಲೊಬ್ಬ । ಪುಣ್ಯವಂತನವ ವಿಠ್ಠಲನ ಭಕ್ತನಿದ್ದ ।
ರಾಜದರಬಾರದಲೂ ಹೆಸರಾಗಿದ್ದ । ಎಲ್ಲರಿಗೂ ಬೇಕಾದವನಾಗಿದ್ದ ॥ 188

ಹತ್ತೊಂಭತ್ತು ಫೆಬ್ರುವರಿಯ ದಿನ । ಹದಿನೆಂಟು ನೂರಾ ಎಪ್ಪತ್ತೆಂಟು ಸನ್ ।
ಆಗ ಒಬ್ಬ ರಾಮಭಕ್ತನ । ಉದರದಿ ಜನಸಿತೀ ರತ್ನ ॥ 189

ಅಲಂಕಾರ ಪಠಾರೆ ಪ್ರಭು ಜಾತಿಯಲ್ಲಿ । ಪ್ರಸಿದ್ಧ ಮನೆತನದವರ ಮನೆಯಲ್ಲಿ ।
ಸನ್ ಹದಿನೆಂಟುನೂರಾಎಪ್ಪತ್ತೆಂಟರಲಿ । ಮುಂಬಯಿಯಲ್ಲಿವನ ಜನನವಾಯಿತು ॥ 190

ಪಾಶ್ಚಾತ್ಯ ವಿದ್ಯಾ ಪಾರಂಗತರು । ಅಡ್ವೋಕೇಟ ಪದವಿ ವಿಭೂಷಿತರು ।
ತತ್ವಜ್ಞಾನದಲ್ಲಿ ನಿಷ್ಣಾತರು । ಎಲ್ಲೆಡೆಗೆ ವಿಖ್ಯಾತರು ವಿದ್ವಾನರವರು ॥ 191

ಪಾಂಡುರಂಗನ ಮೇಲೆ ಅತಿ ಪ್ರೇಮ । ಪರಮಾರ್ಥದಲ್ಲಿ ಆಸ್ಥೆ ಪರಮ ।
ತಂದೆಯ ಆರಾಧ್ಯ ದೈವತ ರಾಮ । ಪುತ್ರನಿಗೆ ವಿಠ್ಠಲನ ಪ್ರೀತಿ ॥ 192

ಎಲ್ಲ ಬಂಧುಗಳಿದ್ದರು ಪದವೀಧರ । ಸದೈವ ಅವರ ವೃತ್ತಿ ಧರ್ಮಪರ ।
ಶುದ್ಧ ಬೀಜದ ಶುದ್ಧ ಸಂಸ್ಕಾರ । ಬಾಳಾರಾಮನ ಮೇಲೆ ಇತ್ತು ಅಪೂರ್ವ ॥ 193

ಮಾತನ್ನು ಅಂದವಾಗಿ ಮಂಡಿಸುವ ಜಾಣ್ಮೆ । ಸರಳ ಶುದ್ಧ ವಿಚಾರ ಸರಣಿ ।
ಕುಶಾಗ್ರ ಬುದ್ಧಿಯವ ಸದಾಚರಣೆ । ಈ ಗುಣವವನವು ಅನುಕರಣೀಯ ॥ 194

ಸಮಾಜ ಸೇವೆಯ ಬಹಳ ಮಾಡಿದರು । ಸ್ವತಃ ಸಮಾಜ ವೃತ್ತಾಂತ ಬರೆದರು ।
ಮುಗಿದಾಗ ಹಿಡಿದ ಈ ವ್ರತ ಹೊರಟರು । ಪರಮಾರ್ಥ ಸಾಧಿಸಲು ॥ 195

ಅದರಲ್ಲೂ ಸಾಕಷ್ಟು ಮುಂದುವರಿದು । ಭಗವದ್ಗೀತಾ ಜ್ಞಾನೇಶ್ವರಿ ಗ್ರಂಥಗಳದು ।
ಓದಿ ಅದರಲ್ಲಿ ಪ್ರಾವೀಣ್ಯತೆ ಪಡೆದು । ಅಧ್ಯಾತ್ಮ ವಿಷಯದಲಿ ಹೆಸರಾದರು ॥ 196

ಸಾಯಿಯ ಪರಮ ಭಕ್ತರವರು । ಹತ್ತೊಂಭತ್ತು ನೂರಾ ಇಪ್ಪತ್ತೈದರಲ್ಲವರು ।
ಚಿಕ್ಕ ವಯಸ್ಸಿನಲ್ಲಿಯೇ ಬ್ರಹ್ಮೀ ಭೂತರಾದರು । ಅವರ ಸಚ್ಚರಿತೆಯನೊಂದಿಷ್ಟು ಕೇಳಬೇಕು ॥ 197

ಜೂನ್ ತಿಂಗಳ ಒಂಭತ್ತನೆಯ ತಾರೀಖಿನಂದು । ಸನ್ ಹತ್ತೊಂಭತ್ತು ನೂರಾ ಇಪ್ಪತ್ತೈದು ।
ಇಹಲೋಹದ ಯಾತ್ರೆ ಮುಗಿಸಿಕೊಂಡು । ವಿಠ್ಠಲನಲ್ಲಿ ವಿಲೀನರಾದರು ॥ 198

ಸನ್ ಹತ್ತೊಂಭತ್ತು ನೂರಾ ಹನ್ನೆರಡು । ಆಗ ಒಂದು ಒಳ್ಳೆಯ ದಿನ ನೋಡಿಕೊಂಡು ।
ಸಾಯಿ ದರಬಾರಕ್ಕೆ ಸಂತದರ್ಶನಕೆಂದು । ಬರುವ ಯೋಗ ಒದಗಿತಾ ಬಂಧುಗಳಿಗೆ ॥ 199

ಜೇಷ್ಠ ಸಹೋದರ ಬಾಬೂಜೀ ಶಿರಡಿಯಲಿ । ಕರೆದುಕೊಂಡು ವಾಮನರಾಯರ ಜೊತೆಯಲಿ ।
ಆರು ತಿಂಗಳ ಹಿಂದೆ ದರ್ಶನ ತೆಗೆದುಕೊಳ್ಳುತಲಿ । ಸಂತೋಷದಿ ಹಿಂದಿರುಗಿದ್ದರು ॥ 200

ಆ ಮಧುರ ಅನುಭವ ಅವರದು । ಇತರರೆಲ್ಲ ತಾವೂ ಅನುಭವಿಸಬೇಕೆಂದು ।
ದರ್ಶನ ಲಾಭವ ಪಡೆಯಲೆಂದು । ಬಾಳಕರಾಮಾದಿಗಳು ಹೋದರು ॥ 201

ಬಾಬಾ ಎಲ್ಲರೆದುರು ಹೇಳಿದ್ದರು । "ಇಂದು ನನ್ನ ದರಬಾರದವರು ।
ಬಹಳ ಜನ ಇಲ್ಲಿ ಬರಲಿರುವರು" । ಎಂದು ಅವರಿನ್ನೂ ಅಲ್ಲಿ ಹೋಗುವ ಮೊದಲೇ ॥ 202

ಈ ಪ್ರೇಮದ ವಾರ್ತೆಯನು ಕೇಳಿದಾಗ್ಯೆ । ಅತಿ ವಿಸ್ಮಯ ಧುರಂದರ ಬಂಧುಗಳಿಗೆ ।
ಬಾಬಾರಿಗೆ ಈ ವಾರ್ತೆ ತಿಳಿಯಿತು ಹೇಗೆ । ನಾವು ಶಿರಡಿಗೆ ಬರುವದನಾರಿಗೂ ಹೇಳಿಲ್ಲವಲ್ಲ ॥ 203

ಬಳಿಕ ಸಾಯಿಯ ಕಣ್ಣಿಂದ ನೋಡಿ । ಚರಣಗಳ ಬಿಗಿದಪ್ಪಿದರು ಹೋಗಿ ಓಡೋಡಿ ।
ಸಾವಕಾಶವಾಗಿ ತೊಡಗಿದರು ಮಾತಿನಲಿ । ಸುಖಸಂತೋಷವೆಲ್ಲರಿಗೆ ॥ 204

ಇದಲ್ಲದೇ ಕಂಡು ಇವರು ಬಂದುದು । ಬಾಬಾರ ಮುಖದಿಂದ ನುಡಿ ಮೂಡಿದ್ದು ।
"ನೋಡಿರಿ ನಾ ನಿಮಗೆ ಹೇಳಿದ್ದು । ದರಬಾರದ ಜನ ಬಂದರು" ॥ 205

ಮತ್ತೆ ಮುಂದೆ ಬಾಬಾ ನುಡಿದರು । ಆ ಸತ್ಯ ವಚನವನಾಲಿಸಬೇಕೆಲ್ಲರೂ ।
"ನಮ್ಮ ನಿಮ್ಮ ಪರಿಚಯ ಅರವತ್ತು ತಲೆಮಾರು । ಮೊದಲಿನಿಂದಲೂ ಇರುವದು" ॥ 206

ಬಾಳಾರಾಮಾದಿ ಬಂಧು ಜನ । ಅವರೆಲ್ಲರೂ ವಿನಯ ಸಂಪನ್ನ ।
ನಿಂತರೆದುರಿಗೆ ಮುಗಿದು ಕರಗಳನ । ಶ್ರೀ ಚರಣಗಳನನುಲಕ್ಷಿಸಿ ॥ 207

ಸಾಯಿಯ ದರ್ಶನವಾದಾಗ್ಯೆ । ಬಾಳಾರಾಮದಿ ಎಲ್ಲರ ಮನಸಿಗೆ ।
ಅನಿವಾರ ಪ್ರೇಮಾವಸ್ಥೆ ಒದಗಿದಾಗ್ಯೆ । ಅಲ್ಲಿಗೆ ಬಂದದ್ದು ಸಾರ್ಥಕವೆನಿಸಿತು ॥ 208

ಕಂಗಳಲಿ ಜಲ ತುಂಬಿ । ಆದರಿಂದ ಗಂಟಲು ಶಿರಉಬ್ಬಿ।
ರೋಮಾಂಚನವಾಯಿತು ಸರ್ವಾಂಗದಿ । ಅಷ್ಟಭಾವಗಳೊತ್ತಿ ಬಂದವು ॥ 209

ಬಾಳಾರಾಮನ ಈ ಅವಸ್ಥೆ ನೋಡಿದಾಗ್ಯೆ । ಸಂತೋಷವಾಯಿತು ಸಾಯಿಯ ಮನಸಿಗೆ ।
ಅವರು ಹೇಳತೊಡಗಿದರವರೆಲ್ಲರಿಗೆ । ಉಪದೇಶದ ಮಾತುಗಳ ಪ್ರೇಮದಿಂದ ॥ 210

ಶುಕ್ಲ ಪಕ್ಷದಲಿ ಬೆಳೆಯುವ ಚಂದ್ರನ । ಹಾಗೆ ಭಜಿಸುವರಾರು ನನ್ನ ।
ಧನ್ಯನವನಾರು ತನ್ನ ಮನೋಧರ್ಮವನ । ಸಂಪೂರ್ಣವಾಗಿ ನನಗೊಪ್ಪಿಸುವ ॥ 211

ದೃಢವಿಶ್ವಾಸವ ಹಿಡಿದು ಮನದಲ್ಲಿ । ತೊಡುಗುವನಾರು ನಿಜಗುರುವಿನ ಭಜನೆಯಲಿ ।
ಈಶ್ವರನವರ ಋಣಿ ಸರ್ವಸ್ವದಲಿ । ಅವನನಾರೂ ವಕ್ರದೃಷ್ಟಿಯಿಂದ ಕಾಣರು ॥ 212

ಒಂದರ್ಧ ಗಳಿಗೆಯನೂ ವ್ಯರ್ಥಗೊಳಿಸದೇ । ಯಾರಿಗೆ ಹರಿಗುರು ಭಜನದಲಿ ಪ್ರೀತಿಯಿದೆ ।
ಅಂಥವನಿಗವರು ತಪ್ಪದೇ । ಭವಸಾಗರವ ದಾಟಿಸುವರು ॥ 213

ಕೇಳುತಿದ್ದಾಗ ಈ ಅವರ ವಚನ । ಎಲ್ಲರ ಕಂಗಳಲಿ ತುಂಬಿತು ಆನಂದ ಜೀವನ ।
ಚಿತ್ತವಾಯಿತು ಸುಪ್ರಸನ್ನ । ಅಂತಃಕರಣ ಸದ್ಗದಿತ ॥ 214

ಸಾಯಿ ವಾಕ್ಯ ಸುಮನಮಾಲೆ । ಎಲ್ಲರೂ ನಮಿಸಿ ಧರಿಸಿದರು ಕೊರಳಿನಲಿ ।
ಆದರಿಂದ ಎಲ್ಲರೂ ತೇಲಿದರು ಆನಂದದಲಿ । ಅದು ಭಕ್ತಿಯ ಉಕ್ಕೇರಿದರಿಂದ ॥ 215

ಬಳಿಕವರು ವಾಡೆಗೆ ಬಂದರು । ಉಂಡು ಸ್ವಲ್ಪ ವಿಶ್ರಮಿಸಿದರು ।
ಮೂರನಯ ಪ್ರಹರದಲಿ ಮತ್ತೆ ಹೋದರು । ದಂಡವತ್ ಪ್ರಣಾಮಗೈದರು ಬಾಬಾಗೆ ॥ 216

ವಿನಯ ಸಂಪನ್ನನಾದ ಬಾಳಾರಾಮನು । ಪಾದ ಸಂವಾಹನೆ ಮಾಡತೊಡಗಿದನು ।
ಬಾಬಾ ಅವನಿಗಿತ್ತು ಚಿಲೀಮನು । ಸೇದಲು ಸನ್ನೆ ಮಾಡಿದರು ॥ 217

ಬಳಿಕಾ ಚಿಲೀಮನ್ನು ಪ್ರಸಾದವೆಂದು । ರೂಢಿ ಇರದಿದ್ದರೂ ಕಷ್ಟದಿಂದ ಸೇದಿದ್ದು ।
ಪುನಃ ಬಾಬಾರ ಕೈಗೆ ಕೊಡುತ । ಸದ್ಭಾವದಿಂದ ವಂದಿಸಿದನು ॥ 218

ಬಾಳಾರಾಮನ ಭಾಗ್ಯದ । ದಿನ ಉದಯಿಸಿತಂದಿನಿಂದ ।
ದಮ್ಮಿನ ವ್ಯಥೆ ನಿಂತಿತು ಅಂದಿನಿಂದ । ಪೂರ್ಣ ಸಮಾಧಾನವಾಯಿತು ॥ 219

ಒಂದೆರಡು ದಿನವಾಗಿರಲಿಲ್ಲ ಆ ದಮ್ಮಿಗೆ । ಪೂರ್ಣ ಆರು ವರ್ಷಗಳಾಗಿರುವಾಗ್ಯೆ ।
ಕಿವಿಯಲಿ ಮಂತ್ರ ಹೇಳಿದ ಹಾಗೆ । ಆ ಚಿಲೀಮೆ ಪ್ರಭಾವ ತೋರಿತು ॥ 220

ಒಂದು ದಮ್ಮು ಚಿಲೀಮೆ ಸೇದಿ । ತಿರುಗಿ ಕೊಟ್ಟಿದ್ದ ನಮಿಸಿ ವಿನಯದಿ ।
ಅಂದು ಹೋದದ್ದು ಆ ದಿನದಿ । ಮತ್ತೆಂದೂ ಬರಲಿಲ್ಲ ॥ 221

ಮಾತ್ರ ನಡುವೆ ಒಂದು ದಿನ ಇಂತು । ಬಾಳಾರಾಮನಿಗೆ ಕೆಮ್ಮು ಬಂತು ।
ಎಲ್ಲರಿಗೂ ಆಶ್ಚರ್ಯವಾಯಿತು । ಕಾರಣ ಯಾರಿಗೂ ತಿಳಿಯಲಿಲ್ಲ ॥ 222

ಆಮೇಲೆ ಅದರ ಮಾಡಲು ಚೌಕಶಿಯನು । ಬಾಬಾ ಅದೇ ದಿನ ಇಟ್ಟರು ನಿಜ ದೇಹವನು ।
ಎಲ್ಲರೂ ತಿಳಿದಾಗ ಇದನು । ಭಕ್ತನಿಗದರ ಗುರುತು ತೋರಿದರೆಂದರು ॥ 223

ಬಾಳಾರಾಮನಿಗೆ ಠಸಿಗೆ ಹತ್ತಿದ ದಿನ । ಅತ್ತ ಬಾಬಾ ಅಂದೇ ನಿಜ ದೇಹವನ ।
ಭೂಮಿಗೆ ಮಾಡಿದರು ಸಮರ್ಪಣ । ಅದರ ಕುರುಹನೇ ತೋರಿದರೇನೋ ॥ 224

ಅಂದಿನಿಂದ ಮತ್ತೆ ಅವನಿಗೆ । ಕೆಮ್ಮು ಬರಲಿಲ್ಲ ಸಾಯುವವರೆಗೆ ।
ಈ ಚಿಲಿಮಿನ ಅನುಭವ ಹೀಗೆ । ಮರೆಯಲಾದೀತೇ ಎಂದಾದರೂ ॥ 225

ಅದರಲ್ಲೂ ಗುರುವಾರದ ದಿನವದು । ಅಂದು ಚಾವಡಿಯ ಮೆರವಣಿಗೆ ಇರುವದು ।
ಅದರಿಂದ ದ್ವಿಗುಣಿತ ಆನಂದದ್ದು । ಅವರಿಗೆ ಸ್ಮರಣೀಯವಾಯಿತು ॥ 226

ಎಂಟರಿಂದ ಒಂಭತ್ತರವರೆಗೆ । ಬಾಬಾರೆದುರು ಅಂಗಳದೊಳಗೆ ।
ತಾಳ ಮೃದಂಗಗಳೊಂದಿಗೆ । ಭಜನೆಗೆ ರಂಗೇರುತ್ತಿತ್ತು ॥ 227

ಒಂದೆಡೆ ಅಭಂಗವೆನ್ನುವರು । ಇನ್ನೊಂದೆಡೆ ಪಲ್ಲಕ್ಕಿಯ ಅಲಂಕರಿಸುವರು ।
ಬಳಿಕ ಬಾಬಾ ಚಾವಡಿಗೆ ಹೊರಡುವರು । ಪಲ್ಲಕ್ಕಿ ಸಿದ್ಧವಾದ ಮೇಲೆ ॥ 228

ಹಿಂದೆ ಮೂವತ್ತೇಳನೆಯ ಅಧ್ಯಾಯದಲ್ಲಿ । ಚಾವಡಿಯ ಸಂಗತಿಯನದರಲ್ಲಿ ।
ಸವಿಸ್ತರವಾಗಿ ವರ್ಣಿಸಿದೆಯಲ್ಲಿ । ಮತ್ತೆ ಹೇಳಿದರೆ ದ್ವಿರುಕ್ತಿಯಾಗುವದು ॥ 229

ಮಶೀದಿಯಲಿರುವರು ರಾತ್ರಿಯೊಂದು । ಚಾವಡಿಯಲಿ ಕಳೆಯುವರು ಎರಡನೆಯದು ।
ಹೀಗೆ ಬಾಬಾರ ನಿಯಮ ನಡೆದದ್ದು । ಸತತ ಮರಣದವರೆಗೆ ॥ 230

ಚಾವಡಿಯ ಸಂಭ್ರಮ ನೋಡುವದು । ಬಾಳಾರಾಮನಿಗೆ ಬಹಳ ಇಷ್ಟವಿದ್ದು ।
ಅದಕ್ಕೇ ಚಾವಡಿಯ ದಿನ ನೋಡಿಕೊಂಡು । ಧುರಂಧರರೆಲ್ಲ ಬಂದಿದ್ದರು ॥ 231

ಶಿರಡಿಯ ಸ್ತ್ರೀ ಪುರುಷರು । ಕರೆದುಕೊಂಡು ಜೊತೆಯಲಿ ಬಾಬಾರ ಅವರು ।
ಉಲ್ಲಾಸದಿಂದ ಜಯ ಜಯಕಾರ ಮಾಡುತಿದ್ದರು । ಹೊರಟರೆಲ್ಲರೂ ಚಾವಡಿಗೆಂದು ॥ 232

ಮೈಮೇಲೆ ಜರತಾರಿ ಝೂಲು ಹಾಕಿದ । ಎಲ್ಲ ಆಭರಣಗಳಿಂದ ಅಲಂಕರಿಸಿದ ।
ಶ್ಯಾಮಸುಂದರವೆಂದೇ ಹೆಸರಿದ್ದ । ಕುದುರೆ ಮುಂದೆ ಕುಣಿಯುತ್ತ ಸಾಗುತ್ತಿತ್ತು ॥ 233

ಕಹಳೆ ತುತ್ತೂರಿಗಳ ನುಡಿಸುತ । ಆ ಅಲಂಕರಿಸಿದ ಶ್ಯಾಮಕರ್ಣದ ಸಹಿತ ।
ಜೊತೆಗೆ ಪಲ್ಲಕ್ಕಿ ಮೆಸೆಸುತ್ತ । ಭಕ್ತರಿಂದ ಸುತ್ತುವರಿದು ಶಿರದಿ ಛತ್ರ ಶೋಭಿಸುತ ॥ 234

ಧ್ವಜ ಪತಾಕೆಗಳ ಕೈಯಲ್ಲಿ ಹಿಡಿದು । ಶ್ರೀಯ ತಲೆಯ ಮೇಲೆ ಛತ್ರವ ಹಿಡಿದು ।
ನವಿಲುಗರಿಯ ಚಾಮರ ಬಿಧುಸುತಿದ್ದು । ನಾಲ್ದೆಸೆಗೆ ದೀವಿಟಿಗೆಗಳುರಿಯುತಿವು ॥235

ಜೊತೆಗೆ ನುಡಿಸುತ್ತ ಮೃದುಂಗ ಸುಸ್ವರ । ಟಾಳಘೋಷ ವಾದ್ಯ ಮಧುರ ।
ಭಜನೆ ಮಾಡುತ ಭಕ್ತ ನಿಕರ । ಬಾಬಾರ ಇಕ್ಕೆಲಗಳಲೂ ನಡೆಯುತಿದ್ದರು ॥ 236

ಇಂಥ ಆ ರಮ್ಯ ಮೆರವಣಿಗೆ । ಬಂದಾಗ ಚಾವಡಿಯ ಎದುರಿಗೆ ।
ಬಾಬಾ ನಿಲ್ಲುವರು ಮುಖ ಮಾಡಿ ಉತ್ತರದ ಕಡೆಗೆ । ವಿಧಿಪೂರ್ವಕ ಹಸ್ತಕ್ರಿಯೆ ಮಾಡುತಿದ್ದರು ॥ 237

ಬಲಗಡೆಗೆ ಬಾಬಾರ ಭಕ್ತನಿದ್ದು । ನಿಜಕರದಲಿ ಬಾಬಾರ ಸೆರಗು ಹಿಡಿದು ।
ತಾತ್ಯಾಪಾಟೀಲ ಕೈಯಲ್ಲಿ ಕಂದೀಲು ಹಿಡಿದು । ಬಾಬಾರ ಎಡಗಡೆಗೆ ಇರುತಿದ್ದ ॥ 238

ಮೊದಲೇ ಬಂಗಾರದಂತೆ ಬಾಬಾರ ಮೈಬಣ್ಣ । ಅದರಲಿ ದೀಪದ ಬೆಳಕಿನ ಮಿಶ್ರಣ ।
ತಾಮ್ರ ಮಿಶ್ರಿತವಾದ ಸುವರ್ಣ । ಅಂತೆಯೇ ಬಾಬಾರ ಮುಖದಲಿರುತಿತ್ತು ಅರುಣಪ್ರಭೆ ॥ 239

ಧನ್ಯ ಆ ಕಾಲದ ಪವಿತ್ರ ದರ್ಶನ । ಉತ್ತರಾಭಿಮುಖವಾಗಿ ಏಕಾಗ್ರಮನ ।
ಮೇಲೆ ಕೆಳಗೆ ಅಲುಗಿಸುವ ಬಲಗೈಯನ । ನೋಡಿ ಯಾರನೋ ಕರೆಯುತಿರುವಂತೆನಿಸುತ್ತಿತ್ತು ॥ 240

ಅಲ್ಲಿಂದ ಮುಂದೆ ಬಾಬಾರ ಚಾವಡಿಯತ್ತ । ಸನ್ಮಾನದಿಂದ ಕರೆದೊಯ್ದು ಕೂಡ್ರಿಸುತ ।
ದಿವ್ಯಾಲಂಕಾರ ವಸ್ತ್ರಗಳನೀಯುತ । ಚಂದನವ ಚರ್ಚಿಸುವರು ಸರ್ವಾಂಗಕೆ ॥ 241

ಶಿರಪೇಚ ಕಳಗಿ ತುರಾಯಿಗಳ ಒಂದು ದಿನ । ಅಂದವಾದ ಸುವರ್ಣ ಮುಗುಟವನಿನ್ನೊಂದು ದಿನ ।
ಒಮ್ಮೊಮ್ಮೆ ಹಾಕುವರು ಮಂದಿಲವನ । ಸುರುಚಿರ ಭರಜರಿಯ ಉಡುಪುಗಳನುಡಿಸಿ ॥ 242

ವಜ್ರ ಮುತ್ತು ಪಚ್ಚೆ ಸರಗಳ । ಹಾಕಿ ಅಲಂಕರಿಸುವರು ಬಾಬಾರ ಕೊರಳ ।
ಸುಗಂಧಿತ ಕಸ್ತೂರಿ ತಿಲಕದಿಂದವರ ಭಾಲ । ಪ್ರದೇಶವನಲಂಕರಿಸುತಿದ್ದರು ॥ 243

ಯಾರಾದರೂ ಪಾದ ಪ್ರಕ್ಷಾಲನ ಮಾಡಿಸುವರು । ಅರ್ಘ್ಯ ಪಾದ್ಯಾದಿಗಳಿಂದ ಪೂಜಿಸುವರು ।
ಕೇಶರದ ಉರುಟಣೆ ಹಚ್ಚುವರು । ತಾಂಬೂಲವ ನೀಡುವರು ಮುಖದಲ್ಲಿ ॥ 244

ಪಂಚಾರತಿಯನು ಹಚ್ಚಿಕೊಂಡು । ಕರ್ಪೂರದಾರತಿಯ ತಕ್ಕೊಂಡು ।
ಅನುಪಮ ಶೋಭೆ ತೋರುವದು । ಬಾಬಾರಿಗೆ ಅದರಿಂದ ಬೆಳಗುವಾಗ ॥ 245

ಪಾಂಡುರಂಗ ಮೂರ್ತಿಯ ವದನ । ದಿವ್ಯ ತೇಜದಿಂದ ಶೋಭಾಯಮಾನ ।
ಆಗುವಂತೆ ಬಾಬಾರ ಮುಖಮಂದನ । ಕಂಡು ವಿಸ್ಮಯ ಚಕಿತರಾದರು ಧುರಂದರ ॥246

ಮಿಂಚು ಹೊಳೆದಂತೆ ನಭೋಮಂಡಲದಲ್ಲಿ । ಭೂಮಿಯಲ್ಲಾದರೂ ಲಕ್ಷಿಸದಿರುತಲಿ ।
ಅಂಥ ತೇಜ ಸಾಯಿಯ ಹಣೆಯಲಿ । ಹೊಳೆದಾಗ ಕಣ್ಣು ಕುಕ್ಕಿದವು ॥ 247

ಕಾಕಡಾರತಿ ಇತ್ತು ಬೆಳಗಿಗೆ । ಧುರಂಧರರೆಲ್ಲ ಹೋದರಲ್ಲಿಗೆ ।
ಅಲ್ಲಿಯೂ ಬಾಬಾರ ಮುಖದೊಳಗೆ । ಅದೇ ತೇಜವನು ಕಂಡರು ॥ 248

ಅಂದಿನಿಂದ ಆಮರಣಾಂತ । ಬಾಳಾರಾಮನ ನಿಷ್ಠೆ ಅತ್ಯಂತ ।
ಸಾಯಿ ಪದದಲುಂಟಾದದ್ದು ನಿಶ್ಚಿತ । ಒಂದಿಷ್ಟೂ ಕಡಿಮೆಯಾಗಲಿಲ್ಲ ॥ 249

ಹೇಮಾಡ ಸಾಯಿ ಪದಕೆ ಶರಣ । ಮುಂದಿನಧ್ಯಾಯದಲಿ ಗ್ರಂಥ ಪೂರ್ಣ ।
ಸಿಂಹಾವಲೋಕನದಲಾಗುವದು ನಿರೂಪಣ । ಚಿತ್ತ ಕೊಡಿರಿ ನನ್ನತ್ತ ಕೊನೆಯದಾಗಿ ॥250

ಭಕ್ತ ಹೇಮಾಡಪಂತ ವಿರಚಿತೆ । ಯಥಾಮತಿ ಲಲಿತಾನುವಾದಿತೇ ।
ಶ್ರೀ ಸಾಯಿ ಸಮರ್ಥ ಸಚ್ಚರಿತೆ । ಭಕ್ತ ತ್ರಯವೃತ್ತ ಕಥನಂ ನಾಮ । ಏಕ ಪಂಚಾಶತ್ತಮೋಧ್ಯಾಯಃ ಸಂಪೂರ್ಣಃ ॥

॥ ಶ್ರೀ ಸದ್ಗುರು ಸಾಯಿನಾಥಾರ್ಪಣಮಸ್ತು ॥

॥ ಶುಭಂ ಭವತು ॥